RNI: KNKAN/ 25/A5387 | ಸಂಪಾದಕರು: ರಾಜೇಶ್ವರಿ ಎನ್. ಓಲೇಕಾರ | ಸಿಇಒ: ಚಂದ್ರಶೇಖರ ಎನ್.ಕೆ. | ಸಹ ಸಂಪಾದಕರು: ಶಿವಕುಮಾರ

ಸಮಾಲೋಚನೆ ಸುದ್ದಿ

ಕನ್ನಡ ದಿನ ಪತ್ರಿಕೆ

ನೇರ ನಿಖರ ನಿರ್ದಿಷ್ಟ

ಸಂಪುಟ (Volume): 1 ಸಂಚಿಕೆ (Issue): 228 ಪುಟ (Page): 4 ದರ Rs. 2 ಮಂಗಳವಾರ 17 ನವೆಂಬರ್ 2026 ● 17 NOVEMBER 2026 ಹಾವೇರಿ ಧಾರವಾಡ ಗದಗ ಕೊಪ್ಪಳ ವಿಜಯನಗರ ಬೆಳಗಾವಿ ಉತ್ತರ ಕನ್ನಡ samalochanersuddi@gmail.com

ಮೊ.ನಂ: 8095203132 PMG/KA/NK/HVR-59/2026-28 SAMALOCHANE RANEBENNURSUDDI Kannada Daily Morning

ಎಸ್‌ಐಆರ್ ವಿರುದ್ಧ ಕೈ ಹೋರಾಟ ತೀವ್ರ

48 ಪ್ರಶ್ನೆಗಳನ್ನು ಕೇಳಲು ಅನುಮತಿ ನೀಡುವಂತೆ ಸುಪ್ರೀಂ ಕೋರ್ಟ್‌ಗೆ ಇಂಡಿಯಾ ಬಣ ಅರ್ಜಿ

ನವದೆಹಲಿ: ಚುನಾವಣಾ ಆಯೋಗದ ವಿರುದ್ಧದ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಇತರ ಇಂಡಿಯಾ ಬ್ಲಾಕ್ ನಾಯಕರು ಸೋಮವಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ಮತದಾರರ ಪಟ್ಟಿಯ ರಾಷ್ಟ್ರವ್ಯಾಪಿ ವಿಶೇಷ ಸಮಗ್ರ ಪರಿಷ್ಕರಣೆ(SIR)ಗೆ ಆದೇಶ ನೀಡಿದ್ದು ಯಾರು? ಈ ನಿರ್ಧಾರದ ಹಿಂದಿನ ಪ್ರಕ್ರಿಯೆಯ ಕುರಿತು ಉತ್ತರಗಳನ್ನು ಕೋರಿ, ಭಾರತೀಯ ಚುನಾವಣಾ ಆಯೋಗ(ECI)ಕ್ಕೆ 48 ಪ್ರಶ್ನೆಗಳನ್ನು ಕೇಳಲು ಅನುಮತಿ ನೀಡಬೇಕು ಎಂದು ಇಂಡಿಯಾ ಬಣ ಸುಪ್ರೀಂ ಕೋರ್ಟ್ ಗೆ ಅರ್ಜಿ ಸಲ್ಲಿಸಿದೆ.

ಎಸ್‌ಐಆರ್ ಪ್ರಕ್ರಿಯೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆ ವೇಳೆ, ಚುನಾವಣಾ ಆಯೋಗವು ತನ್ನ ಪ್ರತಿಕ್ರಿಯೆಯಲ್ಲಿ ಸೂಕ್ತ ದಾಖಲೆಗಳು ಮತ್ತು ವಾಸ್ತವಾಂಶಗಳನ್ನು ನ್ಯಾಯಾಲಯದ ಮುಂದಿಡುವ ಬದಲು ಕೇವಲ ಸಮರ್ಥನೆಗಳನ್ನು ಮಾತ್ರ ನೀಡಿದೆ ಎಂದು ಅರ್ಜಿದಾರರು ಆರೋಪಿಸಿದ್ದಾರೆ.

ರಾಷ್ಟ್ರವ್ಯಾಪಿ SIR ಗೆ ಸಂಬಂಧಿಸಿದ ನಿರ್ಧಾರವನ್ನು ಚುನಾವಣಾ ಆಯೋಗವು ಸಾಮೂಹಿಕವಾಗಿ ತೆಗೆದುಕೊಂಡಿದೆಯೇ ಅಥವಾ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಇತರ ಇಬ್ಬರು ಚುನಾವಣಾ ಆಯುಕ್ತರ ಅನುಮೋದನೆ ಅಥವಾ ಒಪ್ಪಿಗೆಯಿಲ್ಲದೆ ತಮ್ಮ ಅಧಿಕಾರವನ್ನು ಚಲಾಯಿಸಿದ್ದಾರೆಯೇ ಎಂದು ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ.



ರಾಷ್ಟ್ರವ್ಯಾಪಿ SIRಗೆ ಆದೇಶ ನೀಡಿದ್ದು ಯಾರು? ಇತರ ಚುನಾವಣಾ ಆಯುಕ್ತರ ಒಪ್ಪಿಗೆಯಿಲ್ಲದೆ ಎಷ್ಟು ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ ಮತ್ತು ಮತದಾರರ ನೋಂದಣಿಗೆ ಬಳಸಲಾಗುವ ಫಾರ್ಮ್ 6 ಗೆ ಬದಲಾವಣೆಗೆ ಯಾರು ಅನುಮೋದಿಸಿದರು ಎಂಬುದು ಸೇರಿದಂತೆ ಪ್ರತಿಪಕ್ಷ ನಾಯಕರು 48 ಪ್ರಶ್ನೆಗಳನ್ನು ಎತ್ತಿದ್ದಾರೆ.

ವಿಶೇಷ ಪರಿಷ್ಕರಣೆ ಪ್ರಕ್ರಿಯೆಯ ವಿವಿಧ ಅಂಶಗಳ ಕುರಿತು ಅಧಿಕೃತ ದಾಖಲೆಗಳ ಬೆಂಬಲದೊಂದಿಗೆ ವಿವರವಾದ ಉತ್ತರಗಳನ್ನು ಪಡೆಯಲು ಈ ವಿಚಾರಣೆ ಅಗತ್ಯವಿದೆ ಎಂದು ಅರ್ಜಿಯಲ್ಲಿ ಪ್ರತಿಪಾದಿಸಲಾಗಿದೆ. ತಾವು ಕೇಳುತ್ತಿರುವ ಮಾಹಿತಿ ಮತ್ತು ದಾಖಲೆಗಳು ಚುನಾವಣಾ ಆಯೋಗದ ಬಳಿ ಮಾತ್ರ ಲಭ್ಯವಿದ್ದು, ಆಯೋಗದ ಸ್ವಂತ ಹೇಳಿಕೆಗಳನ್ನು ಪರಿಶೀಲಿಸುವ ಉದ್ದೇಶದಿಂದ ಈ ಪ್ರಶ್ನೆಗಳನ್ನು ಸಿದ್ಧಪಡಿಸಲಾಗಿದೆ ಎಂದು ಅರ್ಜಿದಾರರು ತಿಳಿಸಿದ್ದಾರೆ.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್(ಉಥಿಚಿಟಿಛ್ಚು ಏಣ–ಟಚಿಡಿ), ಚುನಾವಣಾ ಆಯುಕ್ತರಾದ ಡಾ. ಸುಖ್‌ಬೀರ್ ಸಿಂಗ್ ಸಂಧು, ಡಾ. ವಿವೇಕ್ ಜೋಶಿ ಹಾಗೂ ಉಪ ಚುನಾವಣಾ ಆಯುಕ್ತ ಭಾನು ಪ್ರಕಾಶ್ ಯೇತೂರು ಸೇರಿದಂತೆ ಇತರ ಅಧಿಕಾರಿಗಳಿಂದ ಉತ್ತರ ಕೋರಿ 48 ಪ್ರಶ್ನೆಗಳ ಪಟ್ಟಿಯನ್ನು ಸುಪ್ರೀಂ ಕೋರ್ಟ್‌ಗೆ (Supreme Court) ಸಲ್ಲಿಸಿದ್ದಾರೆ.

ERONET ಮತ್ತು ECINET ಕೇಂದ್ರೀಕರಣದ ಬಗ್ಗೆಯೂ ಪ್ರಶ್ನಿಸಲಾಗಿದ್ದು, ಇಸಿನೆಟ್ ಅನ್ನು ಹೇಗೆ ವಿನ್ಯಾಸಗೊಳಿಸಲಾಗಿದೆ ಮತ್ತು ನಿರ್ವಹಿಸಲಾಗುತ್ತಿದೆ? ಎಂದು ಅರ್ಜಿದಾರರು ಕೇಳಿದ್ದಾರೆ.

ಈ ಪ್ರಕ್ರಿಯೆಯಲ್ಲಿ ಅಳಿಸಲಾದ ಮತದಾರರ ಸಂಖ್ಯೆ, ಅಳಿಸುವಿಕೆಗೆ ಕಾರಣಗಳು, ಅನುಸರಿಸಿದ ಪರಿಶೀಲನಾ ಪ್ರಕ್ರಿಯೆ, ಬೂತ್ ಮಟ್ಟದ ಅಧಿಕಾರಿಗಳ(ಬಿಎಲ್‌ಒ)ಪಾತ್ರ,ಮತದಾರರಿಗೆನೀಡಲಾದನೋಟಿಸ್‌ಗಳು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಅವರಿಗೆ ಒದಗಿಸಲಾದ ಸಮಯದ ವಿವರಗಳನ್ನು ಸಹ ನಾಯಕರು ಕೋರಿದ್ದಾರೆ.

ಫೋನ್ ಕದ್ದಾಲಿಕೆ; ಆರೋಪ

ಬೆಂಗಳೂರು: ಪ್ರಧಾನಿನರೇಂದ್ರಮೋದಿನೇತೃತ್ವದಕೇಂದ್ರಸರ್ಕಾರವಿರೋಧ ಪಕ್ಷದ ನಾಯಕರ ಫೋನ್‌ಗಳನ್ನು ಕದ್ದಾಲಿಸುತ್ತಿದೆ ಎಂದು ಆರೋಪಿಸಿರುವ ಕರ್ನಾಟಕ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಇದಕ್ಕೂ ಮೊದಲು ಬಿಜೆಪಿಯ ಸ್ವಂತ ನಾಯಕರ ಹಾಗೂ ಸಂಪುಟ ಸಹೋದ್ಯೋಗಿಗಳ ಫೋನ್‌ಗಳ ಮೇಲೆ ಕಣ್ಣಿಡಲಾಗಿತ್ತು ಎಂದು ಗಂಭೀರ ಆರೋಪ ಮಾಡಿದ್ದಾರೆ.



ಮುಖ್ಯಮಂತ್ರಿಸಿದ್ದರಾಮಯ್ಯ,ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ತಮ್ಮ ಫೋನ್‌ಗಳನ್ನೂ ಕದ್ದಾಲಿಸಲಾಗುತ್ತಿದೆ ಎಂದು ಅವರು ಸೋಮವಾರ ಆರೋಪಿಸಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಿಯಾಂಕ್ ಖರ್ಗೆ, ಇಸ್ರೇಲ್‌ನಿಂದ ಪೆಗಾಸಸ್ (ಕಜರಛಿಣ) ಗೂಢಚರ್ಯೆ ತಂತ್ರಾಂಶವನ್ನು ಖರೀದಿಸಿದ್ದ ಕೇಂದ್ರ ಸರ್ಕಾರ, ಆರಂಭದಲ್ಲಿ ತನ್ನದೇ ಸಚಿವರ ವಿರುದ್ಧ ಅದನ್ನು ಬಳಸಿಕೊಂಡಿತ್ತು. ಬಳಿಕ ವಿರೋಧ ಪಕ್ಷದ ನಾಯಕರ ಮೇಲೆ ಕಣ್ಣಿಡಲು ಆರಂಭಿಸಿತು ಎಂದು ದೂರಿದ್ದಾರೆ.

ವಿಪಕ್ಷನಾಯಕರಿಗೂಮುನ್ನಬಿಜೆಪಿಗರಫೋನ್ ಕದ್ದಾಲಿಕೆ:"ಮೊದಲುತಮ್ಮದೇ ಸಚಿವರನ್ನು ಗುರಿಯಾಗಿಸಿಕೊಂಡರು. ಇಸ್ರೇಲ್‌ನಿಂದ ಪೆಗಾಸಸ್ ಸ್ಪೈವೇರ್ ಖರೀದಿಸಲಾಗಿತ್ತು.ಈಕುರಿತುಸುಪ್ರೀಂಕೋರ್ಟ್‌ಮುಂದಿರುವದಾಖಲೆಗಳು ಲಭ್ಯವಿಲ್ಲವೇ? ಮೊದಲು ಯಾರನ್ನು ಗುರಿಯಾಗಿಸಿಕೊಂಡಿದ್ದರು? ತಮ್ಮದೇ ಸಂಪುಟ ಸಹೋದ್ಯೋಗಿಗಳನ್ನು. ನಂತರ ವಿರೋಧ ಪಕ್ಷದ ನಾಯಕರನ್ನು ಗುರಿಯಾಗಿಸಿದರು" ಎಂದು ಖರ್ಗೆ ಹೇಳಿದ್ದಾರೆ.

ಸಿಎಂ, ಗೃಹ ಸಚಿವರ ಫೋನ್‌ಗಳೂ ಟ್ಯಾಪ್?: ದೇಶಾದ್ಯಂತ ಇದೇ ರೀತಿಯ ಕಣ್ಗಾವಲು ವ್ಯವಸ್ಥೆ ಜಾರಿಯಲ್ಲಿದೆ ಎಂದು ಆರೋಪಿಸಿದ ಅವರು, ಇದನ್ನು ರಾಜಕೀಯ ವಿರೋಧಿಗಳ ಮೇಲೆ ಒತ್ತಡ ಹೇರುವ 'ಗುಜರಾತ್ ಮಾದರಿ' ಎಂದು ಟೀಕಿಸಿದ್ದಾರೆ.

"ಎಲ್ಲರ ಫೋನ್‌ಗಳನ್ನೂ ಕದ್ದಾಲಿಸಲಾಗುತ್ತಿದೆ. ಮುಖ್ಯಮಂತ್ರಿಗಳನ್ನೂ ಬಿಡುತ್ತಿಲ್ಲ. ಖಂಡಿತವಾಗಿಯೂ ಈ ಕೆಲಸ ನಡೆಯುತ್ತಿದೆ. ಗೃಹ ಸಚಿವರಾದ ನಮ್ಮ ಫೋನ್‌ಗಳೂ ಟ್ಯಾಪ್ ಆಗುತ್ತಿವೆ" ಎಂದು ಆರೋಪಿಸಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೂಡ ಪ್ರಧಾನಿ ಮತ್ತು ಕೇಂದ್ರ ಸರ್ಕಾರದ ವಿರುದ್ಧ ಮಾಡಿರುವ ಕಣ್ಗಾವಲು ಆರೋಪಗಳನ್ನು ಪ್ರಿಯಾಂಕ್ ಖರ್ಗೆ ಸಮರ್ಥಿಸಿಕೊಂಡಿದ್ದಾರೆ.

ಬಿಜೆಪಿ ಸೇರಿದರೆ ಭ್ರಷ್ಟಾಚಾರ ಆರೋಪ ಮಾಯ

**ಬಿಜೆಪಿಯನ್ನು ರಾಜಕೀಯ 'ವಾಷಿಂಗ್ ಮೆಷಿನ್' ಎಂದು ಟೀಕಿಸಿದ ಪ್ರಿಯಾಂಕ್ ಖರ್ಗೆ, ಕಾಂಗ್ರೆಸ್‌ನಲ್ಲಿರುವ ನಾಯಕರನ್ನು ಭ್ರಷ್ಟರೆಂದು ಬಿಂಬಿಸಲಾಗುತ್ತದೆ. ಆದರೆ, ಅದೇ ನಾಯಕರು ಬಿಜೆಪಿಗೆ ಸೇರಿದ ತಕ್ಷಣ ಅವರ ಮೇಲಿನ ಆರೋಪಗಳು ಮಾಯವಾಗುತ್ತವೆ ಎಂದು ವ್ಯಂಗ್ಯವಾಡಿದ್ದಾರೆ. "ಒಬ್ಬ ವ್ಯಕ್ತಿ ಕಾಂಗ್ರೆಸ್‌ನಲ್ಲಿದ್ದರೆ ಭ್ರಷ್ಟ ಎಂದು ಕರೆಯುತ್ತಾರೆ. ಅದೇ ವ್ಯಕ್ತಿ ಬಿಜೆಪಿಗೆ ಸೇರಿದ ತಕ್ಷಣ ಸಂಪೂರ್ಣವಾಗಿ ಶುದ್ಧವಾಗಿಬಿಡುತ್ತಾರೆ. ಅವರಿಗಿಂತ ಪ್ರಾಮಾಣಿಕರು ಬೇರೆ ಯಾರೂ ಇಲ್ಲ ಎಂಬಂತೆ ಬಿಂಬಿಸಲಾಗುತ್ತದೆ" ಎಂದು ಟೀಕಿಸಿದ್ದಾರೆ. ವಿರೋಧ ಪಕ್ಷದ ನಾಯಕರನ್ನು ದುರ್ಬಲಗೊಳಿಸುವುದು, ಬೆದರಿಸುವುದು ಮತ್ತು ನಿಯಂತ್ರಣದಲ್ಲಿಟ್ಟುಕೊಳ್ಳುವುದೇ ಫೋನ್ ಕದ್ದಾಲಿಕೆಯ ಉದ್ದೇಶ ಎಂದು ಅವರು ಆರೋಪಿಸಿದ್ದಾರೆ. ಆದರೆ, ರಾಹುಲ್ ಗಾಂಧಿಯಂತಹ ನಾಯಕರು ಇಂತಹ ಬೆದರಿಕೆಗಳಿಗೆ ಹೆದರುವುದಿಲ್ಲ ಎಂದಿದ್ದಾರೆ. ಸರ್ಕಾರದ ವಿರುದ್ಧ ತಾರ್ಕಿಕವಾಗಿ ಮತ್ತು ವೈಜ್ಞಾನಿಕವಾಗಿ ಪ್ರಶ್ನೆಗಳನ್ನು ಕೇಳುವವರು ಮುಂದಿನ ದಿನಗಳಲ್ಲಿ ಕಣ್ಗಾವಲಿನ ಗುರಿಯಾಗಬಹುದು ಎಂದೂ ಪ್ರಿಯಾಂಕ್ ಖರ್ಗೆ ಎಚ್ಚರಿಸಿದ್ದಾರೆ.

ಮೋದಿ, ಶಾ ವಿರುದ್ಧ ವಾಗ್ದಾಳಿ

ಕಳೆದ ಹತ್ತೆ ವರ್ಷಗಳ ಆಡಳಿತದ ಬಗ್ಗೆ ವಿರೋಧ ಪಕ್ಷಗಳು ಪ್ರಶ್ನೆಗಳನ್ನು ಎತ್ತುತ್ತಿರುವುದರಿಂದ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅಸಹನೆ ಹಾಗೂ ಅಭದ್ರತೆಯಿಂದ ವರ್ತಿಸುತ್ತಿದ್ದಾರೆ ಎಂದು ಪ್ರಿಯಾಂಕ್ ಖರ್ಗೆ ಟೀಕಿಸಿದ್ದಾರೆ. ಮತಗಳ್ಳತನದ ಆರೋಪ, ಚುನಾವಣಾ ಆಯೋಗದ ಕಾರ್ಯವೈಖರಿ, ನಿರುದ್ಯೋಗ, ಚೀನಾ ಮತ್ತು ಪಾಕಿಸ್ತಾನದ ವಿಚಾರದಲ್ಲಿ ಭಾರತದ ವಿದೇಶಾಂಗ ನೀತಿ ಸೇರಿದಂತೆ ಹಲವು ವಿಷಯಗಳ ಬಗ್ಗೆ ವಿರೋಧ ಪಕ್ಷಗಳು ಪ್ರಶ್ನಿಸುತ್ತಿವೆ. ಆದರೆ, ಈ ಪ್ರಶ್ನೆಗಳಿಗೆ ಉತ್ತರಿಸುವ ಬದಲು ಪ್ರಶ್ನಿಸುವವರ ಧ್ವನಿ ಅಡಗಿಸಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದ್ದಾರೆ.

ಹಿರಿಯೂರ ಉಪಚುನಾವಣೆಯಲ್ಲಿ ಒಮ್ಮತದಿಂದ ಮೈತ್ರಿ ಅಭ್ಯರ್ಥಿ ಕಣಕ್ಕೆ; ಕೇಂದ್ರ ಸಚಿವ ಕುಮಾರಸ್ವಾಮಿ ಸ್ಪಷ್ಟನೆ

ಉಡುಪಿ: ಮುಂಬರುವ ಹಿರಿಯೂರು ವಿಧಾನಸಭಾ ಉಪಚುನಾವಣೆಗೆ ಅಭ್ಯರ್ಥಿ ಆಯ್ಕೆ ಮಾಡುವ ವಿಚಾರದಲ್ಲಿ ಎನ್‌ಡಿಎ ಮೈತ್ರಿಕೂಟದೊಳಗೆ ಆಂತರಿಕ ಭಿನ್ನಾಭಿಪ್ರಾಯಗಳಿವೆ ಎಂಬ ವರದಿಗಳನ್ನು ಜೆಡಿ(ಎಸ್) ನಾಯಕ ಎಚ್.ಡಿ. ಕುಮಾರಸ್ವಾಮಿ ಸೋಮವಾರ ತಳ್ಳಿಹಾಕಿದ್ದಾರೆ. ಜೆಡಿ(ಎಸ್) ಮತ್ತು ಬಿಜೆಪಿ ಒಮ್ಮತದ ಅಭ್ಯರ್ಥಿಯನ್ನು ಕಣಕ್ಕಿಳಿಸಲಿವೆ ಎಂದು ಅವರು ಭರವಸೆ ನೀಡಿದರು.

ರಾಜ್ಯದಲ್ಲಿಆಡಳಿತಾರೂಢಕಾಂಗ್ರೆಸ್‌ಪಕ್ಷವನ್ನುಎದುರಿಸಲು ಎರಡೂ ಪಕ್ಷಗಳು ಪರಸ್ಪರ ನಿಕಟ ಸಮನ್ವಯದೊಂದಿಗೆ ಕೆಲಸಮಾಡುತ್ತಿವೆಎಂದುಕೇಂದ್ರಸಚಿವರುಒತ್ತಿಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಕುಮಾರಸ್ವಾಮಿ, "ಜೆಡಿ(ಎಸ್) ಮತ್ತು ಬಿಜೆಪಿ ನಡುವೆ ಅತ್ಯುತ್ತಮ ಸಮನ್ವಯವಿದೆ. ನಮ್ಮ ಮೈತ್ರಿಕೂಟದಲ್ಲಿ ಬಿರುಕು ಮೂಡಿಸಬಹುದು ಎಂದು ಕಾಂಗ್ರೆಸ್ ನಾಯಕರು ಹಗಲುಗನಸು ಕಾಣುತ್ತಿದ್ದಾರೆ. ಆದರೆ, ರಾಜ್ಯದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ನಾವು ಒಟ್ಟಾಗಿ, ಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡುತ್ತಿದ್ದೇವೆ" ಎಂದು ತಿಳಿಸಿದರು.

ಹಿರಿಯೂರು ಉಪಚುನಾವಣೆಯ ಅಭ್ಯರ್ಥಿ ಆಯ್ಕೆಕುರಿತು ಮಾತನಾಡಿದ ಅವರು, ಎರಡೂ ಪಕ್ಷಗಳು ಈ ವಿಷಯದ ಬಗ್ಗೆ ಚರ್ಚಿಸಿ, ಒಮ್ಮತಕ್ಕೆ ಬರುತ್ತವೆ ಎಂದು ಹೇಳಿದರು. "ನಾವು ನಮ್ಮೊಳಗೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುತ್ತೇವೆ. ನಾವು ಒಬ್ಬ ಉತ್ತಮ ಅಭ್ಯರ್ಥಿಯನ್ನು ಕಣಕ್ಕಿಳಿಸುತ್ತೇವೆ." ಎಂದು ಹೆಚ್ ಡಿ ಕುಮಾರಸ್ವಾಮಿ ಹೇಳಿದ್ದಾರೆ.

ಬಿಜೆಪಿ ಹಿರಿಯ ನಾಯಕ ಆರ್. ಅಶೋಕ್, ಮುಂಬರುವ



ಹಿರಿಯೂರು ವಿಧಾನಸಭಾ ಉಪಚುನಾವಣೆಯಲ್ಲಿ ತಮ್ಮ ಪಕ್ಷವೇ (ಬಿಜೆಪಿ) ಸ್ಪರ್ಧಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಮರುದಿನವೇ ಕುಮಾರಸ್ವಾಮಿ ಈ ಹೇಳಿಕೆ ನೀಡಿದ್ದಾರೆ. ಅಶೋಕ್ ಅವರ ಹೇಳಿಕೆ, ಮೈತ್ರಿ ಪಕ್ಷವಾದ ಜೆಡಿ(ಎಸ್) ಜೊತೆಗಿನ ಸೀಟು ಹಂಚಿಕೆ ವಿಷಯ ಇನ್ನೂ ಬಗೆಹರಿದಿಲ್ಲ ಎಂಬುದನ್ನು ಸೂಚಿಸುವಂತಿತ್ತು. ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ್, ಈ ವಿಷಯದ ಬಗ್ಗೆ ಕುಮಾರಸ್ವಾಮಿ ಅವರೊಂದಿಗೆ ಚರ್ಚಿಸುವುದಾಗಿ ಹೇಳಿದ್ದರು. ಅಲ್ಲದೆ, ಈ ಕ್ಷೇತ್ರವನ್ನು ತಮಗೆ ಬಿಟ್ಟುಕೊಡುವಂತೆ ತಮ್ಮ ಮೈತ್ರಿ ಪಕ್ಷವನ್ನು ಒಪ್ಪಿಸಲು ಬಿಜೆಪಿ ಕೇಂದ್ರನಾಯಕತ್ವ ಪ್ರಯತ್ನಿಸಲಿದೆಎಂದೂ ಅವರು ತಿಳಿಸಿದ್ದರು. ಇದಕ್ಕೆ ಪ್ರತಿಕ್ರಿಯೆಯಾಗಿ, ಬಿಜೆಪಿ ನಾಯಕರು ಹಿರಿಯೂರಿನ ಸ್ಥಳೀಯ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು ಎಂದು ಭಾನುವಾರ ಹೇಳಿದ್ದ ಕುಮಾರಸ್ವಾಮಿ, ಆ ಕ್ಷೇತ್ರದ ಜನರ ಅಭಿಪ್ರಾಯವನ್ನು ಗೌರವಿಸುವಜವಾಬ್ದಾರಿ ಎರಡೂ ಪಕ್ಷಗಳ ಮೇಲಿದೆ ಎಂದು ಪ್ರತಿಪಾದಿಸಿದ್ದರು. ಕಾಂಗ್ರೆಸ್ ಶಾಸಕ ಹಾಗೂ ಅಂದಿನ ಸಚಿವರಾಗಿದ್ದ ಡಿ. ಸುಧಾಕರ್ ಅವರ ನಿಧನದಿಂದಾಗಿ ಹಿರಿಯೂರು ವಿಧಾನಸಭಾ ಕ್ಷೇತ್ರ ತೆರವಾಗಿತ್ತು.

ಕಬ್ಬಿಗೆ 3,600 ನೀಡದಿದ್ದರೆ ಕಾರ್ಖಾನೆಗಳಿಗೆ ಬೀಗ

ಸಕ್ಕರೆ ಸಚಿವರು, ಜಿಲ್ಲಾಡಳಿತದ ವಿರುದ್ಧ ರೈತ ಮುಖಂಡರ ಆಕ್ರೋಶ । ನ.18ರಿಂದ ಸಚಿವರ ನಿವಾಸದ ಮುಂದೆ ಅನಿರ್ದಿಷ್ಟಾವಧಿ ಧರಣಿ.

ಸಮಾಲೋಚನೆ ಸುದ್ದಿ ಹಾವೇರಿ

ಕಬ್ಬಿಗೆ ನ್ಯಾಯಯುತ ಬೆಲೆ ನೀಡುವಂತೆ ಆಗ್ರಹಿಸಿ ರೈತರು ನಡೆಸುತ್ತಿರುವ ಹೋರಾಟಕ್ಕೆ ಸಕ್ಕರೆ ಸಚಿವರು ಹಾಗೂ ಜಿಲ್ಲಾಡಳಿತ ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿರುವ ರೈತ ಮುಖಂಡರು, ಪ್ರತಿ ಟನ್ ಕಬ್ಬಿಗೆ 3,600 ರೂ., ನೀಡದಿದ್ದರೆ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳಿಗೆ ಬೀಗ ಹಾಕಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಬ್ಬು ಬೆಳೆಗಾರರ ಸಮನ್ವಯ ಸಮಿತಿ ಮುಖಂಡ ಅಶೋಕರಡ್ಡಿ ಮರ್ಚರೆಡ್ಡಿ, ರಾಜ್ಯದ ಇತರ ಜಿಲ್ಲೆಗಳಿಗೆ ಹೋಲಿಸಿದರೆ ಹಾವೇರಿಜಿಲ್ಲೆಯರೈತರಿಗೆಕಡಿಮೆಬೆಲೆನೀಡಲಾಗುತ್ತಿದೆ.ಕಲಬುರಗಿಯಲ್ಲಿ ಶೇ.9.8ರಷ್ಟು ಕಬ್ಬಿನ ರಿಕವರಿ ಇದ್ದರೂ ಟನ್‌ಗೆ 3,500 ನೀಡಲಾಗುತ್ತಿದೆ. ಆದರೆ ಹಾವೇರಿಯಲ್ಲಿ ಶೇ.9.85ರಷ್ಟು ರಿಕವರಿ ಇದ್ದರೂ ಸೂಕ್ತ ಬೆಲೆ ನೀಡುತ್ತಿಲ್ಲ. ಕಳೆದ ಎರಡು ವರ್ಷಗಳಿಂದ ರಿಕವರಿ ಲೆಕ್ಕಾಚಾರದಲ್ಲಿ ರೈತರಿಗೆ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿದರು.

ಒಂದು ಕಾಲದಲ್ಲಿ ರೈತರ ಆಡಳಿತದಲ್ಲಿದ್ದ ಸಕ್ಕರೆ ಕಾರ್ಖಾನೆಗಳಲ್ಲಿ ಶೇ.11ರಷ್ಟು ರಿಕವರಿ ಬರುತ್ತಿತ್ತು. ಖಾಸಗಿಯವರ ಕೈಗೆ ಕಾರ್ಖಾನೆಗಳು ಹೋದ ಬಳಿಕ ರಿಕವರಿ ಪ್ರಮಾಣ ಕಡಿಮೆಯಾಗಿರುವುದರ ಹಿಂದಿನ ಕಾರಣವೇನು ಎಂಬುದನ್ನು ಸಮಗ್ರವಾಗಿ ಪರಿಶೀಲಿಸಬೇಕು. ಈ ಕುರಿತು ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾಧಿಕಾರಿಗಳು ಹಾಗೂ ಸಚಿವರು ಸಭೆ ಕರೆದರೂ ಸಕ್ಕರೆ ಕಾರ್ಖಾನೆಗಳ ಮಾಲೀಕರು ಭಾಗವಹಿಸುತ್ತಿಲ್ಲ. ರೈತರ ಬೇಡಿಕೆಗಳಿಗೆ ಕವಡೆ ಕಾಸಿನ ಕಿಮ್ಮತ್ತು ನೀಡುತ್ತಿಲ್ಲ. ಇಂತಹ ಸಂದರ್ಭದಲ್ಲಿ ಸಕ್ಕರೆ ಸಚಿವ ರುದ್ರಪ್ಪ



ಲಮಾಣಿ ಅವರು ನಾನು ಬರೀ ಸಕ್ಕರೆ ಸಚಿವ ಎಂಬ ಉಡಾಫೆಯ ಹೇಳಿಕೆ ನೀಡಿ ಜವಾಬ್ದಾರಿಯಿಂದ ನುಣುಚಿಕೊಳ್ಳುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿ ಟನ್ ಕಬ್ಬಿಗೆ 3,600 ರೂ., ನೀಡುವಂತೆ ಸಚಿವರು ಕೂಡಲೇ ಕ್ರಮ ಕೈಗೊಳ್ಳಬೇಕು. ರೈತರ ಹಿತ ಕಾಪಾಡಲು ಸಾಧ್ಯವಾಗದಿದ್ದರೆ ಸಚಿವರು ರಾಜೀನಾಮೆ ನೀಡಲಿ. ರೈತ ಮುಖಂಡರು ಕಾರ್ಖಾನೆಗಳ ಒಳಗೆ ಪ್ರವೇಶಿಸದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ತರಲಾಗಿದೆ. ಕಾರ್ಖಾನೆಗಳಿಗೆ ಹೋದರೆ ಪ್ರಕರಣ ದಾಖಲಿಸುವ ಬೆದರಿಕೆ ಹಾಕಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಜಿಲ

ಸಮಾಲೋಚನೆ ಸುದ್ದಿ
ಕನ್ನಡ ದಿನ ಪತ್ರಿಕೆ
SAMALOCHANE RANEBENNURSUDDI
Kannada Daily Morning

ಬಸವಣ್ಣನವರ ತತ್ವಾದರ್ಶಗಳು ಯುವ ಪೀಳಿಗೆಗೆ ದಾರಿದೀಪ: ತರಳಬಾಳು ಶ್ರೀ

ಗುತ್ತಲ ಕಲ್ಮಠದಲ್ಲಿ 21 ಅಡಿ ಏಕಶಿಲಾ ಬಸವೇಶ್ವರ ಮೂರ್ತಿ ಲೋಕಾರ್ಪಣೆಗೆ ಸಿದ್ಧತೆ । ಕಾರಂಜಿ ಉದ್ಘಾಟನೆ, 21 ಅಡಿ ರುದ್ರಾಕ್ಷಿ ಮಾಲೆ ಸಮರ್ಪಣೆ

ಸಮಾಲೋಚನೆ ಸುದ್ದಿ ಗುತ್ತಲ

ಬಸವಣ್ಣನವರ ತತ್ವಾದರ್ಶಗಳು ಇಂದಿನ ಪೀಳಿಗೆಯ ಬದುಕಿಗೆ ದಾರಿದೀಪವಾಗಿವೆ. ಭಕ್ತಿ ಕೇವಲ ಬಾಹ್ಯ ಆಡಂಬರಕ್ಕೆ ಸೀಮಿತವಾಗದೆ, ನೈಜತೆ, ಶ್ರದ್ಧೆ ಹಾಗೂ ಅಂತರಂಗದ ಶುದ್ಧತೆಯಿಂದ ಕೂಡಿರಬೇಕು. ಮಕ್ಕಳಿಗೆ ಶಿಕ್ಷಣದ ಜತೆಗೆ ಧಾರ್ಮಿಕ ಮತ್ತು ನೈತಿಕ ಸಂಸ್ಕಾರ ನೀಡಿದಾಗ ಅವರ ಬದುಕು ಸಾರ್ಥಕವಾಗುತ್ತದೆ ಎಂದು ಸಿರಿಗೆರೆಯ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಗುತ್ತಲ ಪಟ್ಟಣದ ಕಲ್ಮಠದ ಆವರಣದಲ್ಲಿ ಸೋಮವಾರ 21 ಅಡಿ ಎತ್ತರದ ಏಕಶಿಲಾ ಜಗಜ್ಯೋತಿ ಬಸವೇಶ್ವರ ಮೂರ್ತಿ ಲೋಕಾರ್ಪಣೆ ಕಾರ್ಯಕ್ರಮದ ಅಂಗವಾಗಿ ವರ್ಣರಂಜಿತ ಕಾರಂಜಿ ಉದ್ಘಾಟಿಸಿ ಆಶೀರ್ವಚನ ನೀಡಿದರು.

ಬಸವಾದಿ ಶಿವಶರಣರು ಜಗತ್ತಿಗೆ ನೀಡಿದ ವಚನ ಸಾಹಿತ್ಯ ಮಾನವೀಯ ಮೌಲ್ಯಗಳ ಅಮೂಲ್ಯ ನಿಧಿಯಾಗಿದೆ. ಬಸವಣ್ಣನವರ 'ಉಳ್ಳವರು ಶಿವಾಲಯ ಮಾಡುವರು, ನಾನೇನು ಮಾಡಲಿ ಬಡವನಯ್ಯ' ಎಂಬ ವಚನ ಕಾಯಕದ ಮಹತ್ವ ಹಾಗೂ ಭಕ್ತಿಯ ನೈಜ ಸ್ವರೂಪವನ್ನು ಸಾರುತ್ತದೆ. ಶರಣರ ವಿಚಾರಧಾರೆಗಳನ್ನು ಮಕ್ಕಳಿಗೆ ಪರಿಚಯಿಸುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದರು.

ಕಲ್ಮಠದ ಲಿಂಗೈಕ್ಯ ಸಂಗನಬಸವ ಸ್ವಾಮೀಜಿಯವರ ಸಂಕಲ್ಪವನ್ನು ಪ್ರಸ್ತುತ ಪೀಠಾಧ್ಯಕ್ಷ ಗುರುಸಿದ್ಧ ಸ್ವಾಮೀಜಿ ಸಾಕಾರಗೊಳಿಸುತ್ತಿರುವುದು ಶ್ಲಾಘನೀಯ. ಸುಂದರ ಉದ್ಯಾನವನ ಹಾಗೂ 21 ಅಡಿ ಎತ್ತರದ ಬಸವೇಶ್ವರರ ಏಕಶಿಲಾ ಮೂರ್ತಿ ಪಟ್ಟಣದ ಧಾರ್ಮಿಕ ಮತ್ತು ಸಾಂಸ್ಕೃತಿಕ ವೈಭವಕ್ಕೆ ಹೊಸ ಮೆರುಗು ನೀಡಲಿವೆ. ಮುಂದಿನ ಪೀಳಿಗೆಗೆ ಬಸವಣ್ಣನವರ ಜೀವನಾದರ್ಶಗಳನ್ನು ಪರಿಚಯಿಸಲು ಈ ಕಾರ್ಯ ಪ್ರೇರಣೆಯಾಗಲಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಂಜೀವಕುಮಾರ ನೀರಲಗಿ ಮಾತನಾಡಿ, ಬಸವಣ್ಣನವರ ಕಾಯಕತತ್ವ, ಸಮಾನತೆ ಹಾಗೂ ಜಾತ್ಯತೀತ ನಿಲುವು ಇಂದಿಗೂ ಸಮಾಜಕ್ಕೆ ಮಾರ್ಗದರ್ಶಕವಾಗಿವೆ. ಕಾಯಕ, ದಾಸೋಹ ಮತ್ತು ಸಮನ್ವಯದ ಮೂಲಕ ಮಾನವೀಯತೆಯ ಸಂದೇಶ ಸಾರಿದ ಬಸವೇಶ್ವರರ ಬೃಹತ್ ಮೂರ್ತಿ ಪ್ರತಿಷ್ಠಾಪಿಸುವ ಮೂಲಕ ಗುರುಸಿದ್ಧ ಸ್ವಾಮೀಜಿ ಗುತ್ತಲ ಮಾತ್ರವಲ್ಲದೆ ಇಡೀ ಜಿಲ್ಲೆ ಹೆಮ್ಮೆಪಡುವ ಕಾರ್ಯ ಮಾಡಿದ್ದಾರೆ ಎಂದರು.

ಉದ್ಯಾನವನದಲ್ಲಿ ಮುಂದಿನ ದಿನಗಳಲ್ಲಿ ಬಸವಾದಿ ಶಿವಶರಣರ





ಮೂರ್ತಿಗಳನ್ನು ಪ್ರತಿಷ್ಠಾಪಿಸಿ, ಅನುಭವ ಮಂಟಪದ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಉದ್ದೇಶವಿದೆ. ಈ ನಿಟ್ಟಿನಲ್ಲಿ ಉಸ್ತುವಾರಿ ಸಚಿವ ರುದ್ರಪ್ಪ ಲಮಾಣಿ ಅವರ ಮೂಲಕ ಅಗತ್ಯ ಅನುದಾನಕ್ಕೆ ಶಿಫಾರಸು ಮಾಡಲಾಗುವುದು ಎಂದು ತಿಳಿಸಿದರು.

ಕಲ್ಮಠದ ಗುರುಸಿದ್ಧ ಸ್ವಾಮೀಜಿ ಮಾತನಾಡಿ, ಮಠವು ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಬಸವಣ್ಣನವರ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡು ಮುನ್ನಡೆಯುತ್ತಿದೆ. ಲಿಂಗೈಕ್ಯ ಸಂಗನಬಸವ ಶ್ರೀಗಳ ಬಹುದಿನಗಳ ಸಂಕಲ್ಪವಾಗಿದ್ದ ಬಸವೇಶ್ವರರ ಏಕಶಿಲಾ ಮೂರ್ತಿ ಪ್ರತಿಷ್ಠಾಪನೆಯ ಕನಸು ನ.17ರಂದು ನನಸಾಗುತ್ತಿರುವುದು ಸಂತಸದ ಸಂಗತಿ. ಈ ಮಹತ್ಕಾರ್ಯಕ್ಕೆ ಭಕ್ತರ ಸಹಕಾರ ಹಾಗೂ ಸಂಗನಬಸವ ಮತ್ತು ರುದ್ರಮುನಿ ಶಿವಯೋಗಿಗಳ ಆಶೀರ್ವಾದವೇ ಶಕ್ತಿಯಾಗಿದೆ ಎಂದರು.

ರುದ್ರಾಕ್ಷಿ ಮಾಲೆ ಸಮರ್ಪಣೆ: ಕಂಚಾರಗಟ್ಟಿಯ ಬಸವರಾಜಪ್ಪಯಲಿಗಾರ ಸಹೋದರರು 21 ಅಡಿ ಉದ್ದದ ರುದ್ರಾಕ್ಷಿ ಮಾಲೆಯನ್ನು ಬಸವೇಶ್ವರರ ಮೂರ್ತಿಗೆ ಸಮರ್ಪಿಸಿದರು. ಭಕ್ತಿಭಾವದ ಈ ಅಪರೂಪದ ಸಮರ್ಪಣೆ ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿತ್ತು.

ಮಠಾಧೀಶರ ಸಾನ್ನಿಧ್ಯ: ಹಾವೇರಿ ಹೊಸಮಠದ ಬಸವಲಿಂಗ ಸ್ವಾಮೀಜಿ, ಹತ್ತಿಮತ್ತೂರಿನ ನಿಜಗುಣ ಸ್ವಾಮೀಜಿ, ಗುಡ್ಡದಾನ್ವೇರಿಯ ಶಿವಯೋಗೀಶ್ವರ ಸ್ವಾಮೀಜಿ, ಹಡಗಲಿಯ ಹಿರಿಯ ಶಾಂತಲಿಂಗ ಸ್ವಾಮೀಜಿ, ಬೆಳಟ್ಟಿಯ ಬಸವರಾಜ ಸ್ವಾಮೀಜಿ, ಶಿಗ್ಗಾಂವಿಯ ಸಂಗನಬಸವ ಸ್ವಾಮೀಜಿ, ಕರ್ಜಗಿಯ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ, ನವಲಗುಂದದ ಶಾಂತವೀರ ಸ್ವಾಮೀಜಿ ಸೇರಿದಂತೆ ವಿವಿಧ ಮಠಗಳ ಮಠಾಧೀಶರು ಸಾನ್ನಿಧ್ಯ ವಹಿಸಿದ್ದರು.

ತೇಜರಾಜ ಜಾನಮನಿ, ಬಸವರಾಜ ಜವಾಯಿ, ಎಸ್.ಎಫ್.ಎನ್. ಗಾ–ಜಿಗೌಡ್ರ, ಚಂದ್ರಣ್ಣ ಪೂಜಾರ, ಉಷಾರಾಣಿ ಕೆ.ಎಚ್. ನಾಯಕ, ಪಟ್ಟಣ ಪಂಚಾಯಿತಿ ಅಧ್ಯಕ್ಷೆ ದೀಪಾ ಭರಡಿ, ಉಪಾಧ್ಯಕ್ಷ ಪರಶುರಾಮ ಯಲಗಚ್ಚ, ಸ್ಥಾಯಿ ಸಮಿತಿ ಅಧ್ಯಕ್ಷ ಪ್ರದೀಪ ಸಾಲಗೇರಿ, ಆಶ್ರಯ ಸಮಿತಿ ಅಧ್ಯಕ್ಷ ಶಹಜಾನಸಾಬ ಅಗಡಿ ಸೇರಿದಂತೆ ಹಲವು ಗಣ್ಯರು ಪಾಲ್ಗೊಂಡಿದ್ದರು.

ಪುಷ್ಪಾವತಿ ಶಲವಡಿಮಠ ಹಾಗೂ ರೈತ ಮುಖಂಡ ಅಶೋಕರಡ್ಡಿ ಮರಚರಡ್ಡಿ ಮಾತನಾಡಿದರು. ಮಠದ ಸಂಗನಬಸವ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮ ಗಮನ ಸೆಳೆಯಿತು. ಮಂಜುಳಾ ಕೊಪ್ಪದ ಸಂಗಡಿಗರಿಂದ ಸಂಗೀತ ಕಾರ್ಯಕ್ರಮ ಹಾಗೂ ಕುಮಾರಿ ಸಾನ್ವಿ ಮಾಳದಕರ ಅವರಿಂದ ಭರತನಾಟ್ಯ ಪ್ರದರ್ಶನ ನಡೆಯಿತು. ಶಿಕ್ಷಕ ಮಾರುತಿ ಕೋಡಬಾಳ ನಿರೂಪಿಸಿದರು. ವೀರಯ್ಯ ಪ್ರಸಾದಿಮಠ ಸ್ವಾಗತಿಸಿದರು.

ಗುತ್ತಲ, ಅಗಡಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಿಂದ ಸಹಸ್ರಾರು ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ದುರಗೇಶ ಗೋಣೆಮ್ಮನವರ ಆದಿ ಜಾಂಬವ ಅಭಿವೃದ್ಧಿ ನಿಗಮದ ರಾಜ್ಯ ನಾಮ ನಿರ್ದೇಶನ ಸದಸ್ಯರನ್ನಾಗಿ ನೇಮಕ, ಶಾಸಕ ಬಸವರಾಜ ಶಿವಣ್ಣನವರಿಗೆ ಅಭಿನಂದನೆ

ಸಮಾಲೋಚನೆ ಸುದ್ದಿ ಹಾವೇರಿ

ಕಾಂಗ್ರೆಸ್ ಪಕ್ಷದ ಮುಖಂಡರು,ಸಮಾಜದ ಹಿರಿಯರು ಹಾಗೂ ಬ್ಯಾಡಗಿ ಪುರಸಭೆ ಮಾಜಿ ಸದಸ್ಯರಾದ ದುರಗೇಶ ಗೋಣೆಮ್ಮನವರ ಅವರನ್ನು ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮದ ರಾಜ್ಯ ನಾಮ ನಿರ್ದೇಶನ ಸದಸ್ಯರನ್ನಾಗಿ ನೇಮಕ ಮಾಡಿದ ಸರ್ಕಾರಕ್ಕೆ ಹಾಗೂ ನೇಮಕ ಸಹಕಾರ ನೀಡಿದ ಬ್ಯಾಡಗಿ ಶಾಸಕರಾದ ಬಸವರಾಜ ಶಿವಣ್ಣನವರ ಅವರಿಗೆ ಸಮಾಜದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಲಾಗುವುದು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕರು ಹಾಗೂ ಅಹಿಂದ ಸಂಘಟನೆಯ ಹೋರಾಟ ಸಮಿತಿಯ ರಾಜ್ಯಾಧ್ಯಕ್ಷರಾದ ಉಡಚಪ್ಪ ಮಾಳಗಿ ಹೇಳಿದರು.

ನಗರದ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ,ಅಹಿಂದ ಸಂಘಟನೆ ಹಾಗೂ ಸಮಾಜದ ವತಿಯಿಂದ ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮದ ರಾಜ್ಯ ನಾಮ ನಿರ್ದೇಶನ ಸದಸ್ಯರಾಗಿ ನೇಮಕವಾದ ದುರಗೇಶ ಗೋಣೆಮ್ಮನವರ ಅವರ ಗೌರವ ಸನ್ಮಾನ ಕಾರ್ಯಕ್ರಮದ ನೇತೃತ್ವವಹಿಸಿ ಅವರು ಶುಭ ಕೋರಿ ಮಾತನಾಡಿದರು.

ಸಮಾಜದ ನಾಯಕರಾದ ದುರಗೇಶ ಗೋಣೆಮ್ಮನವರ ಅವರು ಬ್ಯಾಡಗಿ ಪುರಸಭೆಗೆ ಎರಡು ಬಾರಿ ಸದಸ್ಯರಾಗಿ,ಆಶ್ರಯ ಸಮಿತಿ ಸದಸ್ಯರಾಗಿ ಉತ್ತಮ ಕೆಲಸ ಮಾಡಿದ್ದು,ರಾಜ್ಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ. ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮದ ರಾಜ್ಯ ನಾಮ ನಿರ್ದೇಶನ ಸದಸ್ಯರಾಗಿ ನೇಮಕವಾಗಿದ್ದು ಸಂತೋಷಕರ. ನೇಮಕವಾಗಲು ಹಿರಿಯ ಶಾಸಕರಾದ ಬಸವರಾಜ ಶಿವಣ್ಣನವರ ಅವರ ಶ್ರಮವಿದ್ದು,ಸಮಾಜದ ವತಿಯಿಂದ ಅವರಿಗೆ ಧನ್ಯವಾದಗಳನ್ನು ಸಲ್ಲಿಸಲಾಗುವುದು.ದುರಗೇಶ ಗೋಣೆಮ್ಮನವರ ಅವರು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ಉತ್ತಮ ಕೆಲಸ ಮಾಡಲಿ ಎಂದು ಉಡಚಪ್ಪ ಮಾಳಗಿ ಶುಭ ಕೋರಿದರು.

ನೂತನ ನಾಮನಿರ್ದೇಶಕರಾದ ದುರಗೇಶ ಗೋಣೆಮ್ಮನವರ ಮಾತನಾಡಿ ನೇಮಕ ಮಾಡಿದ ಸರ್ಕಾರಕ್ಕೆ ಹಾಗೂ ಸಹಕಾರ ನೀಡಿ ಎಲ್ಲಾ ಶಾಸಕರಿಗೆ ಅಭಿನಂದನೆಗಳು.ತಮ್ಮೆಲ್ಲರ ಸೇವೆ ಮಾಡಲು ಅವಕಾಶ ನೀಡಿದಂತಾಗಿದೆ.ತಮ್ಮೆಲ್ಲರ ಸಹಕಾರ ಸದಾ ಇರಲಿ ಎಂದರು.

ಈ ಸಂದರ್ಭದಲ್ಲಿ ಡಿಎಸ್ಎಸ್ ಜಿಲ್ಲಾ ಸಂಚಾಲಕರಾದ ಮಾಲತೇಶ ಯಲ್ಲಾಪುರ,ಕಲ್ಯಾಣ ಸಮಿತಿ ಜಿಲ್ಲಾಧ್ಯಕ್ಷರಾದ ಮಂಜಪ್ಪ ಮರೋಳ ಮುಖಂಡರಾದ ಹೊನ್ನಪ್ಪ ತಗಡಿನಮನಿ, ಅಶೋಕ ಮರೆಣ್ಣನವರ, ಮಹೇಶ ಮಾಳಗಿ, ಪರಮೇಶಪ್ಪ ದೇಸಳ್ಳಿ, ಸುನೀಲ ಬೇಟಗೇರಿ, ಬಸಣ್ಣ ಮುಗಳಿ, ಮಲ್ಲೇಶ ಕಡಕೋಳ, ಬಸವರಾಜ ತಡಸದ, ಜಗದೀಶ ಹರಿಜನ,ಯಲ್ಲಮ್ಮ ಮರೇಮ್ಮನವರ, ನೀಲಮ್ಮ ಪೂಜಾರ, ಪುಟ್ಟಪ್ಪ ಕುರಿ, ಭೀಮಣ್ಣ ಯಲ್ಲಾಪುರ, ಪರಶುರಾಮ ಮುಳಗುಂದ, ಸಂತೋಷ ಮಾಳಗಿ, ಗುಡ್ಡಪ್ಪ ಚಿಕ್ಕಪ್ಪನವರ, ನಾಗರಾಜ ಬಾಲಣ್ಣನವರ, ಪರಶುರಾಮ ಗಂಗಮ್ಮನವರ, ಆನಂದ ಮುರೇಡೆಪ್ಪನವರ, ನಿಂಗಪ್ಪ ಹೊಸಳ್ಳಿ, ಕವಿತಾ ಮರೆಮ್ಮನವರ, ಮಹೇಶಪ್ಪ ಹರಿಜನ, ಸತೀಶ ದೊಡ್ಡಮನಿ, ಬಸವಣ್ಣೆಪ್ಪ ಅರಳಿಹಳ್ಳಿ, ಮಹೇಶಪ್ಪ ಹರಿಜನ ಸೇರಿದಂತೆ ಅನೇಕರಿದ್ದರು.



ಕದಂಬ ರತ್ನ ಸಿಂಧೂರ ಲಕ್ಷ್ಮಣ ಪ್ರಶಸ್ತಿಗೆ ಆಯ್ಕೆ

ಹಾವೇರಿ: ಕರ್ನಾಟಕ ರಾಜ್ಯ ಕದಂಬ ಸೈನ್ಯ ಕನ್ನಡ ಸಂಘಟನೆ 2026 ನೇ ಸಾಲಿನ ರಾಜ್ಯೋತ್ಸವ ನಿಮಿತ್ತವಾಗಿ ಕೊಡಲ್ಪಡುವ ಕದಂಬ ರತ್ನ ಸಿಂಧೂರ ಲಕ್ಷ್ಮಣ ಪ್ರಶಸ್ತಿಗೆ ನಾಟಕಕಾರ ಮಹದೇವಪ್ಪ ವರ್ಜಪ್ಪನವರ ಹಾಗೂ ಅನಂತರಾಜ ಹವಳಪ್ಪನವರ ಆಯ್ಕೆಯಾಗಿದ್ದಾರೆ ಎಂದು ಕದಂಬ ಸೈನ್ಯದ ಹಾವೇರಿ ಜಿಲ್ಲಾಧ್ಯಕ್ಷರಾದ ಮಲ್ಲಿಕಾರ್ಜುನ ಬಾಳೂರ ತಿಳಿಸಿದ್ದಾರೆ.





ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ ಅವರು ಜಿಲ್ಲೆಯ ಹಾನಗಲ್ ತಾಲೂಕ ಶಾಡಗುಪ್ಪಿ ಗ್ರಾಮದ ಸುಮಾರು 25ಕ್ಕೂ ಹೆಚ್ಚು ನಾಟಕಗಳಲ್ಲಿ ಪಾತ್ರ ಮಾಡಿ ಎರಡು ನೂರು ಮೇಲ್ಪಟ್ಟು ನಾಟಕ ಕಲಿಸಿದ ಮಹದೇವಪ್ಪ ವರ್ಜಪ್ಪನವರ ಇವರಿಗೆ ಕದಂಬ ರತ್ನ ವೀರ ಸಿಂಧೂರ ಲಕ್ಷ್ಮಣ ಪ್ರಶಸ್ತಿ ದೊರಕಿದೆ ಹಾಗೂ ಹಾವಣಗಿ ಗ್ರಾಮದ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ವಿವಿಧ ಅಭಿವೃದ್ಧಿ ಕಾರ್ಯ ಮಾಡಿ ಭ್ರಷ್ಟ ಅಧಿಕಾರಿಗಳ ವಿರುದ್ಧ ಹೋರಾಡಿದ ಅನಂತರಾಜ ಹವಳಣ್ಣನವರ ಇವರಿಗೆ ಬ್ರಿಟಿಷರ ಸಿಂಹಸ್ವಪ್ನ ವೀರ ಸಿಂಧೂರ ಲಕ್ಷ್ಮಣ ಪ್ರಶಸ್ತಿ ದೊರಕಿದೆ ಎಂದು ಹೇಳಲು ಹೆಮ್ಮೆ ಎನಿಸುತ್ತದೆ. ಇಬ್ಬರಿಗೆ ಪ್ರಶಸ್ತಿ ದೊರಕಿದ್ದಕ್ಕೆ ನಮ್ಮ ಕದಂಬ ಸೈನ್ಯ ವತಿಯಿಂದ ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸಲಾಗುವುದು. ದಿ.20 ರಂದು ಸಿದ್ದಾಪುರ ತಾಲೂಕಿನಲ್ಲಿರುವ ಶ್ರೀ ಭುನವಗಿರಿಯಲ್ಲಿ ಜರುಗುವ ರಾಜ್ಯ ಮಟ್ಟದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಗುವುದು. ಈ ಕಾರ್ಯಕ್ರಮಕ್ಕೆ ಕದಂಬ ಸೈನ್ಯದ ಹಾವೇರಿ ಜಿಲ್ಲೆಯ ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಜಿಲ್ಲಾಧ್ಯಕ್ಷರಾದ ಮಲ್ಲಿಕಾರ್ಜುನ ಬಾಳೂರು ಅವರು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಬ್ಯಾಡಗಿಯ ಯೂನಿಯನ್ ಬ್ಯಾಂಕ್‌ನಲ್ಲಿ ಅಗ್ನಿ ಅವಘಡ: ಎರಡು ಕ್ಯಾಪಿಟಲ್‌ಗಳು ಸುಟ್ಟು ಭಸ್ಮ

ಸಮಾಲೋಚನೆ ಸುದ್ದಿ ಬ್ಯಾಡಗಿ

ಪಟ್ಟಣದ ಗುಮ್ಮನಹಳ್ಳಿ ರಸ್ತೆಯಲ್ಲಿರುವ ಯೂನಿಯನ್ ಬ್ಯಾಂಕ್‌ನಲ್ಲಿ ಸೋಮವಾರ ಬೆಳಗಿನ ಜಾವ ಅಗ್ನಿ ಅವಘಡ ಸಂಭವಿಸಿದ್ದು, ಬ್ಯಾಂಕ್‌ನ ಎರಡು ಕ್ಯಾಬಿನ್‌ಗಳು ಬೆಂಕಿಗೆ ಆಹುತಿಯಾಗಿವೆ.

ಸೋಮವಾರ ಬೆಳಗಿನ ಜಾವ ಸುಮಾರು 4:30 ರ ವೇಳೆಗೆ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಬ್ಯಾಂಕ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎನ್ನಲಾಗಿದೆ. ಕ್ಷಣಾರ್ಧದಲ್ಲಿ ಬೆಂಕಿ ವ್ಯಾಪಿಸಿ ಬ್ಯಾಂಕ್‌ನ ಎರಡು ಕ್ಯಾಬಿನ್‌ಗಳು ಸುಟ್ಟು ಹೋಗಿದ್ದು, ಕಚೇರಿಯಲ್ಲಿದ್ದ ಕೆಲವು ವಸ್ತುಗಳು ಹಾನಿಗೊಳಗಾಗಿವೆ. ಘಟನೆಯಿಂದಾಗಿ ಸಾಕಷ್ಟು ಪ್ರಮಾಣದ ಆಸ್ತಿ ನಷ್ಟ ಸಂಭವಿಸಿದೆ.

ಅಗ್ನಿಶಾಮಕ ದಳ ಸಿಬ್ಬಂದಿ ಸಾಹಸ:ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಹಲವು ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.ಅದೃಷ್ಟವಶಾತ್ ಬ್ಯಾಂಕ್‌ನಲ್ಲಿದ್ದ ನಗದು ಹಣ ಹಾಗೂ ಚಿನ್ನಭರಣಕ್ಕೆ ಯಾವುದೇ ಹಾನಿಯಾಗಿಲ್ಲ ಬ್ಯಾಂಕ್ ಮೂಲಗಳು ತಿಳಿಸಿವೆ.

ಆತಂಕದ ವಾತಾವರಣ:ಬೆಳಗಿನ ಜಾವ ಸಂಭವಿಸಿದ ಈ ಅಗ್ನಿ ಅವಘಡದಿಂದ ಪಟ್ಟಣದಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಶಾರ್ಟ್ ಸರ್ಕ್ಯೂಟ್‌ನಿಂದಲೇ ಬೆಂಕಿ ಸಂಭವಿಸಿದೆಯೇ ಎಂಬ ಬಗ್ಗೆ ಹೆಚ್ಚಿನ ಪರಿಶೀಲನೆಯ ಬಳಿಕ ನಿಖರ ಮಾಹಿತಿ ಲಭ್ಯವಾಗಬೇಕಿದೆ.



ಶಾಸಕ ಬಸವರಾಜ ಶಿವಣ್ಣನವರ ಹಾಗೂ ಎಸ್‌ಪಿ ಭೇಟಿ:ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಶಾಸಕ ಬಸವರಾಜ ಶಿವಣ್ಣನವರ ಹಾಗೂ ಎಸ್‌ಪಿ ಯಶೋಧಾ ವಂಟಗೋಡಿ, ಅಡಿಷನಲ್ ಎಸ್‌ಪಿ ಲಕ್ಷ್ಮಣ ಶಿರಕೋಳ, ಸಿಪಿಐ ಎಂ.ಬಿ.ಚಿಕ್ಕಣ್ಣನವರ, ಪಿಎಸ್‌ಐ ಭಾರತಿ ಕುರಿ ಸೇರಿದಂತೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಂತರ ಶಾಸಕ ಶಿವಣ್ಣನವರ ಅಗ್ನಿ ಅವಘಡದ ಬಗ್ಗೆ ಬ್ಯಾಂಕ್ ಮ್ಯಾನೇಜರ ಜೊತೆ ಕೆಲ ಕಾಲ ಮಾತು ನಡೆಸಿ ಮಾಹಿತಿ ಪಡೆದು–ಕೊಂಡರು.

ಗ್ಯಾರಂಟಿ ಹೆಸರಿನಲ್ಲಿ ಜನಸಾಮಾನ್ಯರ ಬದುಕಿಗೆ ಬರೆ: ವಿರೂಪಾಕ್ಷಪ್ಪ ಬಳ್ಳಾರಿ

ಸಮಾಲೋಚನೆ ಸುದ್ದಿ ಬ್ಯಾಡಗಿ

ರಾಜ್ಯದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಖಂಡಿಸಿ, ಬಿಜೆಪಿ ಕಾರ್ಯಕರ್ತರು ಮಾಜಿ ಶಾಸಕ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ ನೇತೃತ್ವದಲ್ಲಿ ಸೋಮವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಹಳೆ ಪುರಸಭೆ ಮುಂಭಾಗದಲ್ಲಿ ಜಮಾಯಿಸಿದ ಬಿಜೆಪಿ ಕಾರ್ಯಕರ್ತರು, ಕಾಂಗ್ರೆಸ್ ಸರಕಾರದ ಬೆಲೆ ಏರಿಕೆ ನೀತಿ ಯನ್ನು ಖಂಡಿಸಿ ಘೋಷಣೆಗಳನ್ನು ಕೂಗುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಸರಕಾದ ವಿರುದ್ಧ ಧಿಕ್ಕಾರ ಕೂಗಿ, ಜನಸಾಮಾನ್ಯರಿಗೆ ಆಗುತ್ತಿರುವ ಆರ್ಥಿಕ ಹೊರೆಯನ್ನು ಕಡಿಮೆ ಮಾಡುವಂತೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಶಾಸಕ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ, ರಾಜ್ಯ ಸರಕಾರ ಬೆಲೆ ಏರಿಕೆಯ ಮೂಲಕ ಜನಸಾಮಾನ್ಯರ ಬದುಕನ್ನು ಸಂಕಷ್ಟಕ್ಕೆ ದೂಡಿದೆ. ಗ್ಯಾರಂಟಿ ಯೋಜನೆಗಳನ್ನು ನೀಡುವ ಹೆಸರಿನಲ್ಲಿ ಒಂದೆಡೆ ಜನರಿಗೆ ಅನುಕೂಲ ಮಾಡಿ

SAMALOCHANE RANEBENNURSUDDI
Kannada Daily Morning

ಸಮಾಲೋಚನೆ ಸುದ್ದಿ
ಕನ್ನಡ ದಿನ ಪತ್ರಿಕೆ

ಮಂಗಳವಾರ 17 ನವೆಂಬರ್ 2026
17 NOVEMBER 2026

ಸ್ವಂತ ದುಡಿಮೆಯಿಂದ ನೆಮ್ಮದಿಯ ಜೀವನ ಸಾಗಿಸುವಂತಾಗಲಿ: ಪೂರ್ಣಿಮಾ ಕೋಳಿವಾಡ

ರಾಣೆಬೆನ್ನೂರ: ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಸ್ವಂತ ದುಡಿಮೆಯಿಂದ ನೆಮ್ಮದಿಯ ಜೀವನ ಸಾಗಿಸುವಂತಾಗಬೇಕು. ಮಹಿಳೆಯರು ಕೌಶಲ್ಯಗಳನ್ನು ಕಲಿತು ಆರ್ಥಿಕವಾಗಿ ಸಬಲರಾದಾಗ ಮಾತ್ರ ಕುಟುಂಬದ ಅಭಿವೃದ್ಧಿಯೊಂದಿಗೆ ಸಮಾಜದ ಪ್ರಗತಿಯೂ ಸಾಧ್ಯವಾಗುತ್ತದೆ ಎಂದು ಪಿಕೆಕೆ ಇನಿಷಿಯೇಟಿವ್ಸ್ ಅಧ್ಯಕ್ಷೆ ಪೂರ್ಣಿಮಾ ಕೋಳಿವಾಡ ಹೇಳಿದರು.

ತಾಲೂಕಿನ ಮುಷ್ಟೂರು ಗ್ರಾಮದಲ್ಲಿ ಭಾನುವಾರ ಪಿಕೆಕೆ ಇನಿಷಿಯೇಟಿವ್ಸ್ ವತಿಯಿಂದ ಹಮ್ಮಿಕೊಂಡಿದ್ದ 'ನಿರುದ್ಯೋಗ ಮುಕ್ತ ರಾಣೇಬೆನ್ನೂರ' ಅಭಿಯಾನದ ಅಂಗವಾಗಿ ಮಹಿಳೆಯರಿಗಾಗಿ ಆರಂಭಿಸಲಾದ ಉಚಿತ ಹೊಲಿಗೆ ತರಬೇತಿ ಕೇಂದ್ರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅನೇಕ ಮಹಿಳೆಯರು ಶಿಕ್ಷಣ ಹಾಗೂ ವಿವಿಧ ಕೌಶಲ್ಯಗಳನ್ನು ಹೊಂದಿದ್ದರೂ ಸೂಕ್ತ ಅವಕಾಶಗಳ ಕೊರತೆಯಿಂದ ಮನೆಯಲ್ಲಿಯೇ ಉಳಿಯುವಂತಾಗಿದೆ. ಇಂತಹ ಮಹಿಳೆಯರಿಗೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಹೊಲಿಗೆ ಸೇರಿದಂತೆ ವಿವಿಧ ವೃತ್ತಿಪರ ಕೌಶಲ್ಯಗಳ ತರಬೇತಿ ಅತ್ಯಂತ ಸಹಕಾರಿಯಾಗಲಿದೆ ಎಂದರು.

ತರಬೇತಿಯನ್ನು ಕೇವಲ ಪ್ರಮಾಣಪತ್ರಕ್ಕೆ ಸೀಮಿತಗೊಳಿಸದೆ ಆಸಕ್ತಿಯಿಂದ ಕಲಿತು, ಅದನ್ನು ಜೀವನೋಪಾಯದ ಮಾರ್ಗವನ್ನಾಗಿ ರೂಪಿಸಿಕೊಳ್ಳಬೇಕು. ಮಹಿಳೆಯರು ತಮ್ಮಲ್ಲಿರುವ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಗುರುತಿಸಿಕೊಂಡು ಸ್ವಂತ ಉದ್ಯೋಗದ ಮೂಲಕ ಆದಾಯ ಗಳಿಸುವಂತಾಗಬೇಕು. ಈ ಉದ್ದೇಶದಿಂದ ಗ್ರಾಮೀಣ ಭಾಗದ ಮಹಿಳೆಯರಿಗೆ ಉಚಿತ ತರಬೇತಿ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಶಾಸಕ ಪ್ರಕಾಶ ಕೋಳಿವಾಡ ಮಾತನಾಡಿ, ಮಹಿಳೆಯರ ಸಬಲೀಕರಣ ಹಾಗೂ ನಿರುದ್ಯೋಗ ನಿವಾರಣೆಗೆ ಕೌಶಲ್ಯಾಧಾರಿತ ತರಬೇತಿಗಳು ಮಹತ್ವದ ಪಾತ್ರ ವಹಿಸುತ್ತವೆ. ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಇಂತಹ ತರಬೇತಿ ಕೇಂದ್ರಗಳು ದೊರೆಯುವುದರಿಂದ ಮನೆಯಲ್ಲಿಯೇ ಇದ್ದುಕೊಂಡು ಉದ್ಯೋಗ ಕೈಗೊಳ್ಳಲು ಅವಕಾಶ ಸಿಗುತ್ತದೆ. ಮಹಿಳೆಯರು ತರಬೇತಿಯ ಸದುಪಯೋಗಪಡೆದುಕೊಂಡು ಸ್ವಂತ ಉದ್ಯೋಗ ಆರಂಭಿಸುವ ಮೂಲಕ ಆರ್ಥಿಕವಾಗಿ ಸ್ವತಂತ್ರರಾಗಬೇಕು. ನಿರುದ್ಯೋಗ ಮುಕ್ತ ರಾಣೇಬೆನ್ನೂರ ನಿರ್ಮಿಸುವ ನಿಟ್ಟಿನಲ್ಲಿ ಇಂತಹ ಜನಪರ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ರೈತ ಮುಖಂಡ ರವೀಂದ್ರಗೌಡ ಪಾಟೀಲ, ಮಂಜಯ್ಯ ಚಾವಡಿ, ಮಾರುತಿ, ದಿಳ್ಳೆಪ್ಪ ಹೊಟ್ಟಿಗೌಡ್ರು, ಪ್ರಶಾಂತರಡ್ಡಿ ಯರೇಕುಪ್ಪಿ, ಬೀರಪ್ಪ ತೋಟಗಂಟಿ, ದಿಳ್ಳೆಪ್ಪ ಗಂಗಣ್ಣನವರ, ರಮೇಶ ಹಲ್ಡಲ್ಲೇರ, ಕಾವ್ಯ ಮುಷ್ಟೂರ ನಾಯಕರ, ಸುಧಾ ಪಾಟೀಲ್, ರೇಷ್ಮಾ ದೊಡ್ಡಮನಿ, ಕರಬಸಪ್ಪ ಮಡಿವಾಳರ, ಸುರೇಶ ತಳವಾರ, ಸುನಂದವ್ವ ಗೊರವರ, ಭೀಮಪ್ಪ ಹಿರೇಮರದ, ನಂದಾ ಪಾಟೀಲ, ಮಂಜಪ್ಪ ಲಿಂಗದಹಳ್ಳಿ ಸೇರಿದಂತೆ ಮಹಿಳೆಯರು ಮತ್ತಿತರರು ಉಪಸ್ಥಿತರಿದ್ದರು.



ಅರ್ಥಪೂರ್ಣವಾಗಿ ಮಕ್ಕಳ ದಿನ ಆಚರಣೆ

ಸವಣೂರು : ತಾಲೂಕಿನ ಕಾರಡಗಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ರವರ ಜನ್ಮ ದಿನದಂದು ಮಕ್ಕಳ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು .

ಹಿಂದಿನ ದಿನದಂದು ಮಕ್ಕಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು .ಬಹುಮಾನ ವಿತರಿಸಿ ಮಾತನಾಡಿದ ಗುರುಮಾತೆ ಮೇಘಾ.ಡಿ.ಹರ್ತಿ ಮಕ್ಕಳು ಈ ದೇಶದ ನಿಜವಾದ ಸಂಪತ್ತು ಮತ್ತು ಭವಿಷ್ಯದ ರೂವಾರಿಗಳು. ಮಗುವಿನ ಮನಸ್ಸು ಕೇವಲ ಒಂದು ಖಾಲಿ ಕಾಗದದಂತೆ ಅಥವಾ ಮೃದುವಾದ ಮಣ್ಣಿನಂತೆ; ನಾವು ಅದಕ್ಕೆ ಯಾವ ರೂಪ ಕೊಡುತ್ತೇವೆಯೋ ಅದೇ ರೀತಿ ಅದು ರೂಪುಗೊಳ್ಳುತ್ತದೆ. ಕೇವಲ ಪಠ್ಯಪುಸ್ತಕದ ಜ್ಞಾನವನ್ನು ನೀಡುವುದು ಮಾತ್ರವಲ್ಲದೆ, ಅವರಲ್ಲಿ ಮಾನವೀಯ ಮೌಲ್ಯಗಳು, ಕರುಣೆ, ಸೃಜನಶೀಲತೆ ಮತ್ತು ಸಹಾನುಭೂತಿಯನ್ನು ಬೆಳೆಸುವುದು ನಮ್ಮ ಮುಖ್ಯ ಜವಾಬ್ದಾರಿಯಾಗಿದೆ.

ನಿಮ್ಮಲ್ಲಿ ಪ್ರತಿಯೊಬ್ಬರಲ್ಲೂ ಅನನ್ಯವಾದ ಪ್ರತಿಭೆ ಇದೆ. ಸೋಲಿಗೆ ಹೆದರಬೇಡಿ, ತಪ್ಪುಗಳಿಂದ ಕಲಿಯಿರಿ. ದೊಡ್ಡ ಕನಸುಗಳನ್ನು ಕಾಣಿರಿ ಮತ್ತು ಆ ಕನಸುಗಳನ್ನು ಈಡೇರಿಸಿಕೊಳ್ಳಲು ಕಠಿಣ ಪರಿಶ್ರಮಪಡಬೇಕು. ನಿಮ್ಮ ಗುರಿ ತಲುಪಲು ನಾವೆಂದಿಗೂ ನಿಮ್ಮೊಂದಿಗೆ ಇರುತ್ತೇವೆ.

ಇಂದಿನ ಈ ಸುಂದರ ದಿನದಂದು ನಿಮ್ಮೆಲ್ಲರ ಮುಖದಲ್ಲಿ ಮಂದಹಾಸ ಸದಾ ಹೀಗೆಯೇ ಇರಲಿ ಎಂದರು. ಕಾರ್ಯಕ್ರಮದಲ್ಲಿ ಶಾಲಾ ಉಪಪ್ರಧಾನ ಮಂತ್ರಿ ವಿವೇಕಾನಂದ.ಮಂಡಿಗನಾಳ ಅಧ್ಯಕ್ಷತೆ ವಹಿಸಿದ್ದರು.ಶಾಲಾ ಸಂಸತ್ತಿನ ಕಾರ್ತಿಕ, ಡಿಯೋಜ, ಪ್ರಶಾಂತ, ಹರೀಶ, ಸಹನಾ, ಲಕ್ಷ್ಮೀ , ರಾಜೇಶ್ವರಿ.ಬಡಿಗೇರ,ಈರಮ್ಮ,ಸುಶ್ಮಿತಾ,ರಾಜೇಶ್ವರಿ ತಳವಾರ ಮುಖ್ಯಶಿಕ್ಷಕ ಎಫ್ ಆರ್ ಹಿರೇಮಠ , ಶಿಕ್ಷಕರಾದ ಜಿ.ಎನ್.ಪಾಟೀಲ, ಎ.ಫ್ಹಿ. ಬನ್ನಿಕಲ್, ಎಮ್.ಎಚ್. ಮಾದರ, ಎಸ್.ಬಿ. ದೊಡ್ಡಮನಿ, ಯಶೋಧ. ಆರ್. ಎಚ್ , ಮೇಘಾ. ಡಿ. ಹರ್ತಿ, ಮಹಾದೇವಿ. ಸವಣೂರ, ಅನ್ನಪೂರ್ಣ ತೆ–ಂಡೂರ ಹಾಗೂ ಅಡುಗೆ ಸಿಬ್ಬಂದಿ ಮತ್ತು ಶಾಲಾ ಮಕ್ಕಳು ಹಾಜರಿದ್ದರು.





ವಿದ್ಯಾರ್ಥಿಗಳಿಗೆ ವರದಾನ ಯುವ ಸೌರಭ ಕಾರ್ಯಕ್ರಮ

ಹಾವೇರಿ : ಯುವ ಸೌರಭ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ವರದಾನವಾಗಿದ್ದು, ಅವರ ಪ್ರತಿಭೆ ಹಾಗೂ ಸಾಂಸ್ಕೃತಿಕ ಕೌಶಲ್ಯಗಳನ್ನು ಅನಾವರಣಗೊಳಿಸಲು ಉತ್ತಮ ವೇದಿಕೆಯನ್ನು ಕಲ್ಪಿಸಿಕೊಡುತ್ತವೆ ಎಂದು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರಭುಗೌಡ ಎಸ್. ಬಿಷ್ಟನಗೌಡ್ರ ಹೇಳಿದರು.

ನಗರದ ಗಾಂಧಿ ಭವನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸ್ವಾಮಿ ವಿವೇಕಾನಂದ ಪದವಿ ಪೂರ್ವ ಕಾಲೇಜ್ ಹಾವೇರಿ ಇವರ ಸಂಯುಕ್ತ ಆಶ್ರಯದಲ್ಲಿ ಯುವ ಸೌರಭ–2026 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು, ವಿದ್ಯಾರ್ಥಿಗಳು ಇಂತಹ ಕಾರ್ಯಕ್ರಮಗಳ ಸದುಪಯೋಗ ಪಡೆದುಕೊಂಡು ತಮ್ಮಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸುವುದರ ಜೊತೆಗೆ ಉತ್ತಮ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಗುರುತಿಸಿ, ವ್ಯಕ್ತಪಡಿಸಲು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆಸಕ್ತಿ ಬೆಳೆಸಿಕೊಳ್ಳಲು ಯುವ ಸೌರಭದಂತಹ ಕಾರ್ಯಕ್ರಮಗಳು ಸಹಕಾರಿಯಾಗಿವೆ ಎಂದು ತಿಳಿಸಿದರು.

ಯುವ ಸೌರಭ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಸೃಜನಶೀಲತೆ, ಆತ್ಮವಿಶ್ವಾಸ ಹಾಗೂ ಪ್ರತಿಭಾ ವಿಕಸನಕ್ಕೆ ಪ್ರೇರಣೆ ನೀಡುವ ಉತ್ತಮ ವೇದಿಕೆಗಳಾಗಿವೆ ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ ಅವರು ಮಾತನಾಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಯುವ ಸೌರಭ ಕಾರ್ಯಕ್ರಮಗಳನ್ನು ಆಯೋಜಿಸುವುದರಿಂದ ಜಿಲ್ಲೆಯ ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಹಾಗೂ ತಮ್ಮ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಪ್ರದರ್ಶಿಸಲು ಉತ್ತಮ ವೇದಿಕೆ ದೊರೆಯಲಿದೆ ಎಂದರು.

ಜಿಲ್ಲೆಯ ಯುವಕರು ಹಾಗೂ ವಿದ್ಯಾರ್ಥಿಗಳು ಇಂತಹ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಪ್ರಯೋಜನ ಪಡೆದುಕೊಳ್ಳಬೇಕು. ವಿದ್ಯಾರ್ಥಿಗಳ ಭವಿಷ್ಯ ಹಾಗೂ ಸಾಂಸ್ಕೃತಿಕ ಬೆಳವಣಿಗೆಗೆ ಪೂರಕವಾಗಿ ಇಲಾಖೆ ಇನ್ನೂ ವಿನೂತನ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದು, ಅವುಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಕಾರ್ಯದಲ್ಲಿ ಸ್ವಾಮಿ ವಿವೇಕಾನಂದ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ರವಿಕುಮಾರ್ ಟಿ ಪೂಜಾರ,ಪ್ರಮೋದ ಬಣಕಾರ, ವಿದ್ಯಾರ್ಥಿಗಳು, ಕಲಾ ತಂಡಗಳು ಹಾಗೂ ಇತರರು ಉಪಸ್ಥಿತರಿದ್ದರು.



ಸಮಾಜ ಸುಧಾರಕರಾಗಿ ಸಮಾಜಕ್ಕೆ ಉತ್ತಮ ಸಂದೇಶ ನೀಡಿದ ಚೆನ್ನಬಸವಣ್ಣನವರು

ಹಾವೇರಿ: ವಚನಸಾಹಿತ್ಯ,ವಿಭಿನ್ನ ಆಲೋಚನೆಗಳು ಹಾಗೂ ಅವಿರಳ ಜ್ಞಾನದ ಮೂಲಕ ಶ್ರೀ ಚೆನ್ನಬಸವಣ್ಣನವರು ಸಮಾಜ ಸುಧಾರಕರಾಗಿ ಸಮಾಜಕ್ಕೆ ಉತ್ತಮ ಸಂದೇಶಗಳನ್ನು ನೀಡಿದ್ದಾರೆ ಎಂದು ಹೊಸಮಠದ ಶ್ರೀ ಬಸವಶಾಂತಲಿಂಗ ಸ್ವಾಮಿಗಳು ಹೇಳಿದರು.

ಇಲ್ಲಿನ ಕಾಗಿನೆಲೆ ರಸ್ತೆಯ ಶ್ರೀ ಮುರುಘ ರಾಜೇಂದ್ರ ಮಠದಲ್ಲಿ ಆಯೋಜಿಸಿದ ಶ್ರೀ ಚೆನ್ನಬಸವಣ್ಣನವರ ಜಯಂತಿ ಕಾರ್ಯಕ್ರಮದ ಸಾನಿಧ್ಯವಹಿಸಿ ಶ್ರೀಗಳು ಮಾತನಾಡಿ ಆರ್ಶಿವಚನ ನೀಡಿದರು.

ಚೆನ್ನಬಸವಣ್ಣನವರು ಮಹಾನ್ ಜ್ಞಾನಿಗಳಾಗಿದ್ದರು. ಅತ್ಯಂತ ಶ್ರೇಷ್ಠ ಅವಿರಳ ದಿವ್ಯ ಜ್ಞಾನಿಯಾಗಿ ಅನುಭವ ಮಂಟಪಕ್ಕೆ ಮುಕುಟಮಣಿಯಾಗಿದ್ದರು. ಉತ್ತಮ ಸಂಸ್ಕಾರಯುತರಾಗಿ ಜ್ಞಾನದ ನಕ್ಷತ್ರ ಆಗಿದ್ದರು. ಅನುಭವ ಮಂಟಪದಲ್ಲಿ ವಚನಗಳನ್ನು ಸಂಗ್ರಹಿಸಿ ಪರಿಷ್ಕರಿಸಿ ಜವಾಬ್ದಾರಿ ಹೊಂದಿ ಬಸವಣ್ಣನವರ ಶಿಷ್ಯರಾಗಿ ಆಧ್ಯಾತ್ಮಿಕ ಚಕ್ರವರ್ತಿಯಾಗಿ ವಿಶ್ವ ಪಥದಲ್ಲಿ ದಿವ್ಯಪಥವಾಗಿ ಶ್ರೀ ಚೆನ್ನಬಸವಣ್ಣನವರು ಮಹಾನ್ ಜ್ಞಾನಿಯಾಗಿದ್ದರು.ಅವರ ವಚನಗಳಲ್ಲಿ ಅಡಗಿರುವ ಜೀವನದ ಸಂದೇಶಗಳನ್ನು ನಾವೆಲ್ಲರೂ ಪಾಲಿಸುವಂತೆ ಆಗಬೇಕಿದೆ. ವಚನಗಳ ಸಾರವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಬದ್ಧರಾಗಬೇಕು ಎಂದು ಶ್ರೀ ಚೆನ್ನಬಸವಣ್ಣನವರ ಜೀವನ ಹಾಗೂ ಅವರ ಜೀವನ ಸಂದೇಶಗಳ ಕುರಿತು ಶ್ರೀಗಳು ತಿಳಿಸಿದರು.

ಬಂಕಾಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ರಮೇಶ ತೆವರಿ ಮಾತನಾಡಿ ಸಾಮಾಜಿಕ ಒಳಿತಿಗಾಗಿ ಶ್ರಮಿಸಿದವರು ಶ್ರೀ ಚೆನ್ನಬಸವಣ್ಣನವರು. ಅವರ ವಚನಗಳು ಹರಿತವಾಗಿವೆ.ಬಸವಣ್ಣನವರ ಕಾಯಕ ಆಶಯಗಳನ್ನು ಪಾಲಿಸೋಣ. ವಚನಗಳನ್ನು ಅರ್ಥಮಾಡಿಕೊಂಡು ಮನುಷ್ಯರಾಗಿ ಬದುಕಬೇಕು.ನಾವೆಲ್ಲರೂ ಶರಣರ ವಿಚಾರಧಾರೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಮುಂದಾಗಬೇಕು ಎಂದು ವಚನಗಳ ಕುರಿತು ಮಾತನಾಡಿದರು.

ಈ ಸಂದರ್ಭದಲ್ಲಿ ಸಮಾಜ ಸೇವಕರು,ಶ್ರೀಮಠದ ಭಕ್ತರಾದ ಪರಶುರಾಮ ಹಲ್ಯಾಪುರ, ವಕೀಲರಾದ ಜಯದೇವ ಕೆರೂಡಿ,ಶಿವಯೋಗೆಪ್ಪ ಅಂಗಡಿ,ರುದ್ರಪ್ಪ ಜಾಬೀನ್,ರುದ್ರೇಶ ಚಿನ್ನಣ್ಣನವರ,ಬಾಪು ನಂದಿಹಳ್ಳಿ. ನಿಂಗಪ್ಪ ಆರೇರ,ಅಮೀರಜಾನ ಬೇಪಾರಿ,ಶಾಹೀದ ದೇವಿಹೂಸೂರ,ನಿಶಾರ ಪಟೇಲ,ಮಂಜನಗೌಡ ಗಾಜೀಗೌಡ್ರ,ಮುತ್ತಿರಾಜ ಹಿರೇಮಠ, ನವೀದ ಅಮ್ಮಿನಬಾವಿ ಸೇರಿದಂತೆ ಅನೇಕರಿದ್ದರು.



27ರಂದು ಕನಕದಾಸರ ಜಯಂತಿ ಅರ್ಥಪೂರ್ಣ ಆಚರಣೆ: ಎಡಿಸಿ ಡಾ.ನಾಗರಾಜ ಎಲ್.

ಹಾವೇರಿ: ಜಿಲ್ಲಾ ಮಟ್ಟದ ಶ್ರೀ ಕನಕದಾಸರ ಜಯಂತಿ ಕಾರ್ಯಕ್ರಮ ನ.27 ರಂದು ಕಾಗಿನೆಲೆ ಮಠದ ಆವರಣದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಎಲ್. ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಶ್ರೀ ಕನಕದಾಸರ ಜಯಂತಿ ಆಚರಣೆ ಪೂರ್ವ ಸಿದ್ಧತೆ ಸಭೆ ಅಧ್ಯಕ್ಷತೆ ವಹಿಸಿ, ಸಮಾಜದ ಮುಖಂಡರೊಂದಿಗೆ ಚರ್ಚಿಸಿದ ಅವರು, ಸಮಾಜದ ಮುಖಂಡರ ನಿರ್ಣಯದಂತೆ ಅಂದು ಬೆಳಿಗ್ಗೆ 11 ಗಂಟೆಗೆ ಕಾಗಿನೆಲೆ ವೃತ್ತದಲ್ಲಿ ಶ್ರೀ ಕನಕದಾಸರ ಮೂರ್ತಿ ಆವರಣ ಹಾಗೂ ಮಧ್ಯಾಹ್ನ 2–30ಗಂಟೆಗೆ ವೇದಿಕೆ ಕಾರ್ಯಕ್ರಮ ಜರುಗಲಿದೆ. ಎಲ್ಲ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದು ಸೂಚನೆ ನೀಡಿದರು.

ಮೆರವಣಿಗೆಗೆ ಕಲಾ ತಂಡ, ಶಿಷ್ಟಾಚಾರದಂತೆ ಆಮಂತ್ರಣಪತ್ರಿಕೆ ಮುದ್ರಣಕ್ಕೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಸೂಚನೆ ನೀಡಿದರು. ಸರ್ಕಾರಿ ಕಚೇರಿ, ಶಾಲಾ–ಕಾಲೇಜುಗಳಲ್ಲಿ ಜಯಂತಿ ಆಚರಣೆ ಮಾಡಬೇಕು ಎಂದು ಸೂಚನೆ ನೀಡಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್.ಎಫ್.ಎನ್.ಗಾಜಿಗೌಡ್ರ ಮಾತನಾಡಿ, ಶ್ರೀ ಕನಕದಾಸರ ಜಯಂತಿ ಅಂಗವಾಗಿ ಕಾಗಿನೆಲೆ ಮಠದಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮಠದ ಸ್ವಾಮೀಜಿಗಳು ಹಳ್ಳಿಹಳ್ಳಿಗೆ ತೆರಳಿ ದುಶ್ಚಟಗಳನ್ನು ಬಿಡಿಸುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಇಂದಿನಿಂದ ಸಂಜೆ 6 ಗಂಟೆಗೆ ಮಠದ ಆವರಣದಲ್ಲಿ ಪುರಾಣ, ಅನ್ನಪ್ರಸಾದ ಸೇವೆ ಜರುಗಲಿದೆ ಎಂದರು.



ನ.27 ರಂದು ಬೆಳಿಗ್ಗೆ 11 ಗಂಟೆಗೆ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಕಾಗಿನೆಲೆ ವೃತ್ತದಲ್ಲಿ ಶ್ರೀ ಕನಕದಾಸರ ಮೂರ್ತಿ ಅನಾವರಣ ಮಾಡಲಿದ್ದಾರೆ. ಅಧಿಕಾರಿಗಳು ಹಾಗೂ ಸಮಾಜಬಾಂಧವರು, ಸಾರ್ವಜನಿಕರು ಎಲ್ಲರೂ ಸೇರಿಕೊಂಡು ಶ್ರೀ ಕನಕದಾಸರ ಜಯಂತಿ ಅರ್ಥಪೂರ್ಣ ಹಾಗೂ ವಿಜೃಂಭಣೆಯಿಂದ ಮಾಡೋಣ ಎಂದರು.

ಸಭೆಯಲ್ಲಿ ಕನ್ನಡಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ವಿವಿಧ ಇಲಾಖೆಗಳ ಅಧಿಕಾರಿಗಳು, ಸಮಾಜದ ಜಿಲ್ಲಾ ಹಾಗೂ ತಾಲೂಕಾ ಅಧ್ಯಕ್ಷರು, ಸದಸ್ಯರು, ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಸಮಾಲೋಚನೆ ಸುದ್ದಿ
SAMALOCHANE RANEBENNURSUDDI
Kannada Daily Morning

ಪ್ರಶ್ನಿಸೋಣ, ತರ್ಕಿಸೋಣ, ವಿಜ್ಞಾನವನ್ನು ಅಳವಡಿಸಿಕೊಳ್ಳೋಣ: ಆರ್.ಎಸ್. ಪಾಟೀಲ್

ಹಾವೇರಿ: ಮಕ್ಕಳಲ್ಲಿ ಸಹಜವಾಗಿಯೇ ಕುತೂಹಲ ಮತ್ತು ಆಸಕ್ತಿ ಇರುತ್ತದೆ. ಮನೆಯಲ್ಲಿ ಪ್ರತಿಯೊಂದು ವಿಷಯವನ್ನೂ ಪ್ರಶ್ನಿಸುವ ಮನೋಭಾವ ಮಕ್ಕಳಲ್ಲಿರುತ್ತದೆ. 'ಇದು ಯಾಕೆ? ಅದು ಹೇಗೆ?' ಎಂಬ ಪ್ರಶ್ನೆಗಳೇ ವಿಜ್ಞಾನದ ಆರಂಭ. ಪ್ರಶ್ನಿಸುವ, ತರ್ಕಿಸುವ ಮನೋಭಾವ ಬೆಳೆಸಿಕೊಂಡು ವಿಜ್ಞಾನವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ನಿವೃತ್ತ ವಿಜ್ಞಾನ ಶಿಕ್ಷಕ ಆರ್.ಎಸ್. ಪಾಟೀಲ್ ಹೇಳಿದರು.

ನಗರದ ಮುನ್ಸಿಪಲ್ ಪ್ರೌಢಶಾಲೆಯಲ್ಲಿ ನ.14ರಂದು ಭಾರತ ಜ್ಞಾನ ವಿಜ್ಞಾನ ಸಮಿತಿ ಆಯೋಜಿಸಿದ್ದ ರಾಮನ್ ಹಾಗೂ ನೆಹರು ಸಪ್ತಾಹದ ಅಂಗವಾಗಿ ವೈಜ್ಞಾನಿಕ ಮನೋವೃತ್ತಿ ಆಂದೋಲನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.ವಿಜ್ಞಾನಿ ಸಿ.ವಿ. ರಾಮನ್ ಅವರು ಸರಳ ಸಾಧನಗಳನ್ನು ಬಳಸಿಕೊಂಡು ವಿಶ್ವವೇ ಅಚ್ಚರಿಪಡುವಂತಹ ಸಂಶೋಧನೆಗಳನ್ನು ಮಾಡಿದ್ದಾರೆ. ವಿಜ್ಞಾನ ಕ್ಷೇತ್ರಕ್ಕೆ ಅವರ ಕೊಡುಗೆ ಅಪಾರವಾಗಿದೆ ಎಂದು ತಿಳಿಸಿದ ಅವರು, ಮಕ್ಕಳೊಂದಿಗೆ ಸಂವಾದ ನಡೆಸಿ ಅವರ ಪ್ರಶ್ನೆಗಳಿಗೆ ಉತ್ತರಿಸಿದರು.

ಹಿರಿಯ ಸಾಹಿತಿ ಹನುಮಂತಗೌಡ ಗೊಲ್ಲರ್ ಮಾತನಾಡಿ,ಸಮಾಜದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಸಾಧನೆಗಳ ಬಳಕೆ ಹೆಚ್ಚಾಗುತ್ತಿದೆಯೇ ಹೊರತು ವೈಚಾರಿಕತೆ ಹಾಗೂ ವೈಜ್ಞಾನಿಕ ಮನೋಭಾವಗಳು ನಿರೀಕ್ಷಿತ ಮಟ್ಟದಲ್ಲಿ ಬೆಳೆಯುತ್ತಿಲ್ಲ.ದೃಶ್ಯಮಾಧ್ಯಮಗಳು ಕೆಲವೊಮ್ಮೆ ಜನರ ಅಜ್ಞಾನ ಮತ್ತು ಮೂಢನಂಬಿಕೆಗಳನ್ನು ಬಿತ್ತುವ ಕೆಲಸ ಮಾಡುತ್ತಿವೆ. ಇಂದಿಗೂ ಸಮಾಜದಲ್ಲಿ ಮೂಢನಂಬಿಕೆಗಳು ಜೀವಂತವಾಗಿವೆ. ಅವುಗಳನ್ನು ಹೋಗಲಾಡಿಸಲು ನೆಹರು ಅವರ ವೈಜ್ಞಾನಿಕ ದೃಷ್ಟಿಕೋನ ನಮಗೆ ಅಗತ್ಯವಾಗಿದೆ ಎಂದರು. ಸ್ವಾತಂತ್ರ್ಯಾನಂತರ ಭಾರತದಲ್ಲಿ ಬಡತನ, ಅನಕ್ಷರತೆ, ಹಸಿವು ಹಾಗೂ ಮೂಢನಂಬಿಕೆಗಳು ವ್ಯಾಪಕವಾಗಿದ್ದವು.



ಓದು-ಬರಹ ಬಲ್ಲ ಪ್ರತಿಯೊಬ್ಬ ಭಾರತೀಯನಿಗೂ ಪರಿಚಿತವಾಗಿರುವ ವಿಜ್ಞಾನಿ ಎಂದರೆ ಸರ್ ಸಿ.ವಿ. ರಾಮನ್ ಎಂದು ಹೇಳಿದರು.

ಪ್ರಧಾನ ಗುರುಮಾತೆ ಶೋಭಾ ಜಾಗಟಗೇರಿ ಮಾತನಾಡಿ, ಮಕ್ಕಳ ದಿನಾಚರಣೆಯಂದು ಮಹನೀಯರ ಸ್ಮರಣೆಯೊಂದಿಗೆ ಇಂತಹ ಕಾರ್ಯಕ್ರಮ ಆಯೋಜಿಸಿರುವುದು ಔಚಿತ್ಯಪೂರ್ಣವಾಗಿದೆ. ನಂಬಿಕೆ ಇರಲಿ, ಮೂಢನಂಬಿಕೆ ಬೇಡ. ನಮ್ಮ ನಿತ್ಯಜೀವನದಲ್ಲಿಯೂ ವಿಜ್ಞಾನ ಹಾಸುಹೊಕ್ಕಾಗಿದೆ. ವಿಜ್ಞಾನವನ್ನು ಪ್ರೀತಿಸಿ, ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಮಕ್ಕಳಿಗೆ ಕರೆ ನೀಡಿದರು. ಭಾರತ ಜ್ಞಾನ ವಿಜ್ಞಾನ ಸಮಿತಿ ಜಿಲ್ಲಾಧ್ಯಕ್ಷ ಜಗದೀಶ ಮಹಾರಾಜಪೇಟ ಅಧ್ಯಕ್ಷತೆ ವಹಿಸಿ ಮಾತನಾಡಿ,ನೆಹರು ಅವರ ಜನ್ಮದಿನದ ಸ್ಮರಣಾರ್ಥ ನ.14ರಂದು ಮಕ್ಕಳ ದಿನಾಚರಣೆ ಆಚರಿಸಲಾಗುತ್ತದೆ. ಮಕ್ಕಳು ಮಾನವ ಲೋಕದ ಸುಂದರ ಪುಷ್ಪಗಳು ಎಂದು ಬಣ್ಣಿಸಿದರು. ಇದೇ ಸಂದರ್ಭದಲ್ಲಿ ಪ್ರಶಸ್ತಿ ಪುರಸ್ಕೃತ ನಿವೃತ್ತ ಮುಖ್ಯಶಿಕ್ಷಕ ಮಾಲತೇಶ ಕರ್ಜಗಿ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಸಮಿತಿಯ ಶಂಕರ ಸುತಾರ, ರಾಣೇಬೆನ್ನೂರು ತಾಲೂಕು ಅಧ್ಯಕ್ಷೆ ಇಂದಿರಾ ಬಾರಂಗಿ, ಜ್ಯೋತಿ ಬಸೇಟ್ಟಿಯವರ, ಶಿಕ್ಷಕ ವೆಂಕಟೇಶ ಸೇರಿದಂತೆ ಶಿಕ್ಷಕ-ಶಿಕ್ಷಕಿಯರು ಉಪಸ್ಥಿತರಿದ್ದರು. ರಾಜ್ಯ ಸಮಿತಿ ಸದಸ್ಯೆ ರೇಣುಕಾ ಗುಡಿಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು. ರವಿ ಲಮಾಣಿ ಸ್ವಾಗತಿಸಿದರು. ಸೃಷ್ಟಿ ಬಣಕಾರ ನಿರೂಪಿಸಿದರು. ಅಶೋಕ ಎಣ್ಣೆಯವರ ವಂದಿಸಿದರು.

ಶತಮಾನದ ಅಂಚಿನಲ್ಲಿರುವ ಜೈ ಹನುಮಾನ್ ವ್ಯಾಯಾಮ ಶಾಲೆ ಅಭಿವೃದ್ಧಿಗೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಸೂಚನೆ

ಹರಿಹರ : ನಗರದ ಎ.ಕೆ. ಕಾಲೋನಿಯಲ್ಲಿರುವ ಶತಮಾನದ ಅಂಚಿನಲ್ಲಿರುವ ಶಿಥಿಲಾವಸ್ಥೆಯ ಜೈ ಹನುಮಾನ್ ವ್ಯಾಯಾಮ ಶಾಲೆಗೆ ಗಣಿ ಮತ್ತು ಭೂ ವಿಜ್ಞಾನ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ ಅವರು ಭೇಟಿ ನೀಡಿ ಪರಿಶೀಲಿಸಿದರು.

ಖಾಸಗಿ ಕಾರ್ಯದ ನಿಮಿತ್ತ ನಗರಕ್ಕೆ ಆಗಮಿಸಿದ್ದ ಸಚಿವರು ವ್ಯಾಯಾಮ ಶಾಲೆಗೆ ಭೇಟಿ ನೀಡಿ ಕಟ್ಟಡದ ಸಂಪೂರ್ಣ ಸ್ಥಿತಿಗತಿಯನ್ನು ವೀಕ್ಷಿಸಿದರು. ವ್ಯಾಯಾಮ ಶಾಲೆಯ ಶಿಥಿಲಾವಸ್ಥೆಯನ್ನು ಗಮನಿಸಿದ ಸಚಿವರು, ತಕ್ಷಣವೇ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರವಾಣಿ ಮೂಲಕ ಸಂಪರ್ಕಿಸಿ, ವ್ಯಾಯಾಮ ಶಾಲೆಯ ನವೀಕರಣ ಹಾಗೂ ಅಭಿವೃದ್ಧಿ ಕಾಮಗಾರಿಗೆ ಅಗತ್ಯವಾದ ಅಂದಾಜು ಪಟ್ಟಿ (ಎಸ್ಟಿಮೇಟ್) ಸಿದ್ಧಪಡಿಸಿ ತರಿಸುವಂತೆ ಸ್ಥಳದಲ್ಲೇ ಸೂಚನೆ ನೀಡಿದರು.


ಸುಮಾರು ನೂರು ವರ್ಷಗಳ ಇತಿಹಾಸ ಹೊಂದಿರುವ ವ್ಯಾಯಾಮ ಶಾಲೆಯನ್ನು ಉಳಿಸಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸಚಿವರು ತಕ್ಷಣ ಸ್ಪಂದಿಸಿರುವುದು ಹಿರಿಯ ಹಾಗೂ ಕಿರಿಯ ಕ್ರೀಡಾಪಟುಗಳಲ್ಲಿ ಸಂತಸ ಮೂಡಿಸಿದೆ.

ಈ ಸಂದರ್ಭದಲ್ಲಿ ಮಾಜಿ ಶಾಸಕ ಎಸ್. ರಾಮಪ್ಪ, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ತಾಲೂಕು ಅಧ್ಯಕ್ಷ ನಂದಿಗಾವಿ ಶ್ರೀನಿವಾಸ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ, ಹಿರಿಯ ಕುಸ್ತಿಪಟು ಪಿ.ಎಚ್. ರಾಮಕೃಷ್ಣ (ರಾಮಜ್ಜ), ಮಾದಿಗ ಸಮಾಜದ ಅಧ್ಯಕ್ಷ ಹಾಗೂ ಪತ್ರಕರ್ತ ಎಂ.ಎಸ್. ಆನಂದಕುಮಾರ್, ಸಂತೋಷ್ ನೋಟದವರ್, ಹೆಚ್. ತಿಪ್ಪೇಶ್, ಪೈ ಮಹಾದೇವ ಪೈ,ಜಿ. ಮಹಾಂತೇಶ್, ಸಂತೋಷ್ ದೊಡ್ಡಮನಿ, ಬಸವರಾಜ್ ಇಟಿಗಿ, ಎಂ. ಮಂಜುನಾಥ್, ಸುರೇಶ್, ಮಹೇಶ್ ನೋಟದವರ್, ಕಾಂತರಾಜ್ ಸೇರಿದಂತೆ ವ್ಯಾಯಾಮ ಶಾಲೆಯ ಹಿರಿಯ ಮತ್ತು ಕಿರಿಯ ಕ್ರೀಡಾಪಟುಗಳು ಉಪಸ್ಥಿತರಿದ್ದರು.



ಶಾಲಾ ಕಾಲೇಜ್ ಬಂದ್‌ಗೆ ಆಡಳಿತ ಮಂಡಳಿ ವಿರೋಧ ಡಾ. ಕುಬೇರಪ್ಪ

ಹಾವೇರಿ: ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನೌಕರರು ತಮ್ಮ ಬೇಡಿಕೆಗಳ ಬಗ್ಗೆ ಪ್ರತಿಭಟಿಸುವುದು ತಪ್ಪೇನಿಲ್ಲ, ಶಾಲಾ ಅವಧಿಯನಂತರ ಅಥವಾ ರಜಾ ದಿಗಳಲ್ಲಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ನಮ್ಮ ತಕರಾರು ಏನು ಇಲ್ಲ. ಆದರೆ 18 ರಿಂದ ಶಾಲ-ಕಾಲೇಜ್ ಬಂದ್‌ಗೆ ಕರೆಕೊಟ್ಟಿರುವುದನ್ನ ಹಾವೇರಿ ಜಿಲ್ಲಾ ಅನುದಾನಿತ ಶಾಲಾ-ಕಾಲೇಜುಗಳ ಒಕ್ಕೂಟ ವಿರೋಧಿಸಿದೆ ಎಂದು ಒಕ್ಕೂಟದ ಪದಾಧಿಕಾರಿ ಡಾ॥ ಆರ್.ಎಂ.ಕುಬೇರಪ್ಪ ತಿಳಿಸಿದ್ದಾರೆ. ಶಾಲಾ-ಕಾಲೇಜು ಬಂದ್ ಮಾಡಲು ನೀಡಿರುವ ಕರೆ ತುಂಬಾ ಅವೈಜ್ಞಾನಿಕ ಹಾಗೂ ರಾಜಕೀಯ ಪ್ರೇರಿತವಾಗಿದ್ದು ಈಗ ಮಕ್ಕಳಿಗೆ ಪರೀಕ್ಷೆ ತುಂಬಾ ಹತ್ತಿರವಿರುವುದರಿಂದ ಹಾಗೂ ಶಿಕ್ಷಕರ ಮೇಲೆ ಇಲಾಖೆಯಿಂದ ತುಂಬಒತ್ತಡವಿರುವುದರಿಂದ,ಇಲಾಖೆಯಕೆಲಸಗಳನಡುವೆಯೂ ಶಾಲೆಗಳನ್ನು ಬಂದ್‌ಮಾಡಿ ಶಿಕ್ಷಕರನ್ನು ಬೀದಿಗಿಳಿಸುವುದು ತುಂಬಾ ಅಪಾಯಕಾರಿ ಕೆಲಸ, ಇದರಿಂದ ಪೋಷಕರು ತಮ್ಮ ಮಕ್ಕಳಿಗಾಗುತ್ತಿರುವ ಅನ್ಯಾಯದ ವಿರುದ್ಧ ಶಿಕ್ಷಕರ ವಿರುದ್ಧವೇ ತಿರುಗಿ ಬೀಳುವ ಎಲ್ಲಾ ಸಾಧ್ಯತೆಗಳಿರುವುದರಿಂದ ಶಾಲಾ-ಕಾಲೇಜ್ ಬಂದ್ ಮಾಡುವುದಕ್ಕೆ ನಮ್ಮ ಬೆಂಬಲವಿಲ್ಲವೆಂದು ಆಡಳಿತಮಂಡಳಿಯ ಒಕ್ಕೂಟ ಸ್ಪಷ್ಟಪಡಿಸಿದೆ, ಎಂದು ಕುಬೇರಪ್ಪ ತಿಳಿಸಿದ್ದಾರೆ.



ಈ ಹಿಂದೆ ಕಾಂಗ್ರೆಸ್ ಸರ್ಕಾರ ಅಧಿಕಾರ ವಿದ್ದಾಗ ಮಾನ್ಯ ಶ್ರೀ ಚಂದ್ರಶೇಖರ್‌ರವರು ಶಿಕ್ಷಣ ಮಂತ್ರಿಗಳು ಇದ್ದಾಗ 28 ಬೇಡಿಕೆಗಳನ್ನು ಮುಂದಿಟ್ಟು 21 ದಿವಸ ಶಾಲಾ ಕಾಲೇಜ್ ಬಂದ್ ಮಾಡಿದಾಗ ಸಾರ್ವಜನಿಕರು ವಿರೋದ ಮಾಡಿದ ಹಿನ್ನೆಲೆಯಲ್ಲಿ ಯಾರನ್ನೂ ಕೇಳದೆ ಸಚಿವರ ಜೊತೆಗೆ ಸಭೆಮಾಡಿ ಮುಷ್ಕರ ವಾಪಾಸ್ಸು ಪಡೆದಿದ್ದು, ಕೇವಲ 25 ರೂಪಾಯಿ ವೈದ್ಯಕೀಯ ಭತ್ಯೆಗೆ ಒಪ್ಪಿಕೊಂಡು ಬಂದಿದ್ದು, ನಂತರ ಶಿಕ್ಷಕರ 21 ದಿವಸ ರಜೆಗೆ ಅವರ ವೇತನ ಕಡಿತವಾಗಿದ್ದು ನಮ್ಮ ಕಣ್ಣ ಮುಂದಿದೆ, ಹೀಗಾಗಿ ಅವರದೇ ನೇತೃತ್ವದಲ್ಲಿ ಮತ್ತೊಮ್ಮೆ ಇಂತಹ ಸಾಹಸಮಾಡುವುದು ವ್ಯರ್ಥಕಸರತ್ತು ಆಗಬಹುದೇ ವಿನಹ ಶಿಕ್ಷಕರಿಗೆ ಇದರಿಂದ ಯಾವುದೇ ಲಾಭವಾಗಲಿಕ್ಕಿಲ್ಲ.

ಶಾಸ್ವತ ಅನುದಾನರಹಿತ ಶಾಲೆಗಳು ಜನತಾದಳ ಸರ್ಕಾರದ ಪಾಪದ ಕೂಸುಗಳು, ಎಸ್.ಎಂ.ಕೃಷ್ಣ ಸರ್ಕಾರವಿದ್ದಾಗ ಈ ಹಣೆಪಟ್ಟಿಯನ್ನು ತೆಗೆದು ಇವುಗಳನ್ನು ಅನುದಾನಕ್ಕೊಳಪಡಿಸಿದ್ದು ನಮ್ಮ ಪ್ರಯತ್ನ. ನಂತರ ಅನುದಾನಿತ ಶಾಲಾ-ಕಾಲೇಜುಗಳಲ್ಲಿನ ಖಾಲಿ ಹುದ್ದೆ ತುಂಬಲು ಹಲವು ವರ್ಷಗಳ ಅವಧಿನಿಗದಿಮಾಡಿದ್ದು, ಬೋಧಕೇತರ ಹುದ್ದೆಗಳನ್ನು ಶಾಸ್ವತವಾಗಿ ತುಂಬದಂತೆ ಅಧಿವೇಶನದಲ್ಲಿ ಕಾಯ್ದೆ ಪಾಸುಮಾಡಿದ್ದು, ಮಾನ್ಯ ಯಡಿಯೂರಪ್ಪನವರ ಬಿಜೆಪಿ ಸರ್ಕಾರದಲ್ಲಿಯೇ ಆಗಿದೆ ಎಂದಿರುವ ಕುಬೇರಪ್ಪ

ಅನುದಾನಿತ ಶಾಲಾ ಕಾಲೇಜುಗಳು ಇರುವ ಸ್ಥಳದಲ್ಲಿ ಬೇಕಾಬಿಟ್ಟಿ ನೂರಾರು ಸರ್ಕಾರಿ ಶಾಲೆ, ಪದವಿ-ಪೂರ್ವ ಕಾಲೇಜು ಹಾಗೂ ಪದವಿ ಕಾಲೇಜುಗಳನ್ನು ಮಂಜೂರ ಮಾಡಿದ್ದು, ಅನುದಾನಿತ ಶಾಲಾ ಕಾಲೇಜುಗಳು ಮುಚ್ಚುವ ಪರಿಸ್ಥಿತಿಗೆ ಬಂದಿದ್ದು ಶಾಲಾ ಶಿಕ್ಷಕರ ವರ್ಗಾವಣೆ ಕೌನ್ಸಿಲಿಂಗ್ ತಂದಿದ್ದು, ಗಂಡ ಹೆಂಡತಿಯರನ್ನು ಶಾಸ್ವತವಾಗಿ ಬೇರ್ಪಡಿಸಿದ್ದು ಮಾನ್ಯಶ್ರೀ ಬಸವರಾಜ ಹೊರಟ್ಟಿಯವರು ಶಿಕ್ಷಣ ಮಂತ್ರಿಯಾಗಿದ್ದ ಬಿಜೆಪಿ-ಜೆಡಿಎಸ್ ಸರ್ಕಾರದಲ್ಲಿಯೇ ಈಗ ತಾವೇ ಶಾಲಾ-ಕಾಲೇಜ್ ಬಂದ್‌ಮಾಡಿ ಮುಷ್ಕರಕ್ಕೆ ಕರೆದರೆ ಬೇಡಿಕೆಗಳು ಈಡೇರಿಸಲು ಸಾಧ್ಯವೇ?. ಎಂದು ಡಾ॥ ಕುಬೇರಪ್ಪ ಪ್ರಶ್ನಿಸಿದ್ದಾರೆ.

ನಾನೇ ಪ್ರಣಾಳಿಕೆ ಸಮಿತಿಯಲ್ಲಿದ್ದು, ಅನುದಾನರಹಿತ ಶಾಲಾ ಕಾಲೇಜುಗಳಿಗೆ ಅನುದಾನ ನೀಡಬೇಕೆಂದು, ಅನುದಾನಿತ ಶಾಲಾ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆ ತುಂಬಲು, ಹಳೆಯ ಪಿಂಚಣಿ ಯೋಜನೆಯನ್ನು ಮುಂದುವರೆಸಲು, ಅತಿಥಿ ಉಪನ್ಯಾಸಕರ ಸೇವೆ ಖಾಯಂ ಮಾಡಲು ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿದೆ.ಈಗಾಗಲೇಹಳೆಯಪಿಂಚಣಿಮುಂದುವರೆಸಲು ಸಮಿತಿ ನೇಮಕಮಾಡಿ ವರದಿ ಪಡೆಯಲಾಗಿದ್ದು ದೇಶದ ಬೇರೆ-ಬೇರೆ ರಾಜ್ಯಗಳು ಯಾವ ರೀತಿಯಲ್ಲಿ ಜಾರಿಮಾಡಿದ್ದಾರೆ, ಎಂಬ ಬಗ್ಗೆ ಅಧ್ಯಯನ ನಡೆಯುತ್ತಿದ್ದು, ಈ ಬಗ್ಗೆ ಲಕ್ಷಾಂತರ ಸರ್ಕಾರಿ ನೌಕರರ ಸಭೆಯಲ್ಲಿಯೇ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ. ಇತ್ತೀಚೆಗೆ ಮಾನ್ಯ ಉಪಮುಖ್ಯಮಂತ್ರಿಗಳೂ ಸಹಿತ ಅತೀ ಶೀಘ್ರದಲ್ಲೆ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ. ಅನುದಾನಿತ ಶಾಲಾ-ಕಾಲೇಜುಗಳಲ್ಲಿ ಖಾಲಿ ಹುದ್ದೆ ತುಂಬಲು ಪ್ರಕ್ರಿಯೆ ನಡೆದಿದ್ದು ಇನ್ನೊಂದು ವಾರದಲ್ಲಿಯೇ ಹುದ್ದೆ ತುಂಬಲು ಅನುಮತಿ ನೀಡಲಿದ್ದಾರೆ, ಕೆಲವು ಸಮಸ್ಯೆಗಳು ಪ್ರತೀ ಶಿಕ್ಷಕರ ಚುನಾವಣೆ ಮುಂದಿದ್ದಾಗ ಚಾಲ್ತಿಗೆ ಬರುತ್ತವೆ.

ಆಡಳಿತದಲ್ಲಿರುವ ಸರ್ಕಾರ ಶಿಕ್ಷಕರು ಹಾಗೂ ಅನುದಾನಿತ ಸಂಸ್ಥೆಗಳ ಬೇಡಿಕೆಗಳನ್ನು ಈಡೇರಿಸುವ ಸ್ಪಷ್ಟ ಭರವಸೆಗಳು ಹಾಗೂ ಸೂಚನೆಗಳು ಮತ್ತು ಸರ್ಕಾರದ ಬದ್ಧತೆ ಘೋಷಣೆ ಮಾಡಿದ ಮೇಲೆಯೂ ಶಾಲಾ- ಕಾಲೇಜ್‌ಗಳನ್ನು ಬಂದ್ ಮಾಡಿ ಶಿಕ್ಷಕರ ಬೇಡಿಕೆಗಳು ನನ್ನ ಹೋರಾಟದ ಫಲದಿಂದಲೇ ಈಡೇರಿಸಲಾಗಿದೆ ಎಂಬ ಕ್ರೆಡಿಟ್ ಪಡೆಯಲು ಈ ಪ್ರತಿಭಟನೆ ಮಾಡುವುದಾದರೆ ಖಂಡಿತ ನಮ್ಮ ವಿರೋಧವಿದೆ ಎಂದು ಹೇಳಿರುವ ಡಾ॥ ಕುಬೇರಪ್ಪ ಈ ಎಲ್ಲ ಸರ್ಕಾರದ ನಿರ್ಧಾರಗಳಲ್ಲಿ ನಮ್ಮ ಆಡಳಿತ ಮಂಡಳಿಯ ಒಕ್ಕೂಟದ ಶ್ರಮವಿದೆ.

ಶಿಕ್ಷಕರ ಸಮಸ್ಯೆಗಳ ಪರಿಹಾರಕ್ಕಾಗಿ ಹಾಗೂ ಅವರ ಬೇಡಿಕೆಗಳ ಪರವಾಗಿ ಕೆಲಸಮಾಡಲೆಂದೇ ಶಿಕ್ಷಕರ ಹಾಗೂ ಪದವೀಧರರ ಪ್ರತಿನಿಧಿಗಳನ್ನು ಆಯ್ಕೆಮಾಡಲಾಗಿದೆಯಾದ್ದರಿಂದ ಶಿಕ್ಷಕರನ್ನ ಬೀದಿಗಿಳಿಸುವ ಬದಲು, ಎಲ್ಲಾ 14 ಎಂಎಲ್‌ಸಿಗಳೇ ವಿಧಾನಸೌಧದ ಮುಂದೆ ಉಪವಾಸಮಾಡಲಿ ಎಂದಿರುವ ಡಾ॥ ಕುಬೇರಪ್ಪ ಈ ಎಲ್ಲಾ ಸಮಸ್ಯೆಗಳನ್ನು ಯಡಿಯೂರಪ್ಪ ಹಾಗೂ ಬೊಮ್ಮಾಯಿಯ ಬಿಜೆಪಿ ಅವಧಿಯ ಸರ್ಕಾರದಲ್ಲಿ ಏಕೆ ಮಾಡಿಸಲಿಲ್ಲ ಎಂಬುದಕ್ಕೆ ಮಾನ್ಯ ಹೊರಟ್ಟಿಯವರು ಉತ್ತರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಶಿಕ್ಷಕರ ಮೇಲಿನ ಗೌರವದಿಂದ ಅವರ ಬಹು ಮುಖ್ಯ ಬೇಡಿಕೆಗಳನ್ನು ಈಡೇರಿಸುವ ಸಂದರ್ಭದಲ್ಲಿಯೇ ಸರ್ಕಾರದ ವಿರುದ್ಧ ಮುಷ್ಕರ ಮಾಡುವುದರಿಂದ ಸರ್ಕಾರಕ್ಕೆ ಮುಜುಗರ ಮಾಡದಂತೆ, ಯಾವ ಶಿಕ್ಷಕರೂ ಇಂತಹ ರಾಜಕೀಯ ಪ್ರೇರಿತ ಮುಷ್ಕರದಲ್ಲಿ ಪಾಲ್ಗೊಳ್ಳಬಾರದು, ಪ್ರಜ್ಞಾವಂತ ಶಿಕ್ಷಕರು ಖಾಸಗೀ ಆಡಳಿತಮಂಡಳಿಯ ತೀರ್ಮಾನದ ವಿರುದ್ಧ ನಡೆದುಕೊಳ್ಳಬಾರದು ಎಂದು ಡಾ॥ ಕುಬೇರಪ್ಪ ಮನವಿ ಮಾಡಿಕೊಂಡಿದ್ದಾರೆ.

ಇಲಾಖೆಗಳ ಪ್ರಗತಿ ಸಾಧನೆಗೆ ಹೆಚ್ಚಿನ ಆಸಕ್ತಿ ವಹಿಸಿ: ಸಚಿವ ರಾಯರಡ್ಡಿ

ಗದಗ: ಜಿಲ್ಲೆಯಲ್ಲಿ ವಿವಿಧ ಇಲಾಖೆಗಳ ಮೂಲಕ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳ ಪ್ರಗತಿ ಸಾಧನೆಗೆ ಅಧಿಕಾರಿಗಳು ಹೆಚ್ಚಿನ ಆಸಕ್ತಿ ಮತ್ತು ಬದ್ಧತೆಯಿಂದಕಾರ್ಯನಿರ್ವಹಿಸಬೇಕು.ಇಲಾಖೆಗೆದೊರೆತಅವಕಾಶವನ್ನು ಸಾರ್ಥಕಗೊಳಿಸುವುದರ ಜತೆಗೆ ಇತರರಿಗೆ ಮಾದರಿಯಾಗುವ ರೀತಿಯಲ್ಲಿ ಕೆಲಸ ಮಾಡಬೇಕು ಎಂದು ಗದಗ ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ರಾಯರಡ್ಡಿ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ಸಚಿವ ಬಸವರಾಜ ರಾಯರಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಸೋಮವಾರ ಮತ್ತು ಮಂಗಳವಾರ ಎರಡು ದಿನಗಳ ಕಾಲ ನಿರಂತರವಾಗಿ ನಡೆಯಲಿರುವ ಸಭೆಯಲ್ಲಿ ಮೊದಲ ಹಂತವಾಗಿ ಕೃಷಿ, ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ, ಮೀನುಗಾರಿಕೆ ಹಾಗೂ ಕರ್ನಾಟಕ ಬೀಜ ನಿಗಮದ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಲಾಯಿತು.

ಪ್ರತಿಯೊಂದು ಇಲಾಖೆಯಲ್ಲಿನ ಮಂಜೂರಾದ ಹುದ್ದೆಗಳು, ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ, ಖಾಲಿ ಹುದ್ದೆಗಳು, ಹೊರಗುತ್ತಿಗೆ ನೌಕರರ ಸಂಖ್ಯೆ, ವೇತನಕ್ಕೆ ಅಗತ್ಯವಿರುವ ಅನುದಾನ, ಯೋಜನೆಗಳ ಅನುಷ್ಠಾನ,ಇಲಾಖೆಯಪ್ರಗತಿ,ವಿಶೇಷಸಾಧನೆಹಾಗೂಕುಂದುಕೊರತೆಗಳ ಕುರಿತು ಅಧಿಕಾರಿಗಳು ಸ್ಪಷ್ಟ ಮತ್ತು ಸಮಗ್ರ ಮಾಹಿತಿ ನೀಡಬೇಕು ಎಂದು ಸಚಿವರು ಸೂಚಿಸಿದರು.

ಸಭೆಯಲ್ಲಿ ಅನಗತ್ಯ ವಿಷಯಗಳ ಚರ್ಚೆಗೆ ಅವಕಾಶ ನೀಡದೆ, ಇಲಾಖೆಗೆ ಸಂಬಂಧಿಸಿದ ವಿಷಯಗಳನ್ನೇ ಸ್ಪಷ್ಟವಾಗಿ ಮಂಡಿಸಬೇಕು. ಸರ್ಕಾರದ ಯೋಜನೆಗಳ ಅನುಷ್ಠಾನದಲ್ಲಿ ಅಧಿಕಾರಿಗಳು ವೈಯಕ್ತಿಕ ಆಸಕ್ತಿ ವಹಿಸಿ ನಿಗದಿತ ಗುರಿ ಸಾಧಿಸಬೇಕು. ತಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿ ಇಲಾಖೆಯ ಪ್ರಗತಿಗೆ ಕೊಡುಗೆ ನೀಡಬೇಕು ಎಂದು ಕಿವಿಮಾತು ಹೇಳಿದರು.

ಕೃಷಿ ಪ್ರಗತಿಗೆ 23.29 ಕೋಟಿ: ಕೃಷಿ ಇಲಾಖೆಯ ಪ್ರಗತಿ ಪರಿಶೀಲನೆ